2016 ಕ.ತೀ.ವ 1157

(ಧಾರವಾಡ ನ್ಯಾಯಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ವಿನಾಯಕ ಎಸ್. ಶೆಟ್ಟಿ –ವಿರುದ್ಧ– ಕರ್ನಾಟಕ ಸರ್ಕಾರ*

ದಂಡ ಪ್ರಕ್ರಿಯಾ ಸಂಹಿತೆ – ಸೆಕ್ಷನ್ 482 ರಡಿ ಅರ್ಜಿ.

ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರನ ವಿರುದ್ಧ ಕೇಂದ್ರೀಯ ಅನ್ವೇಷಣಾ ಬ್ಯೂರೊ (ಸಿ.ಬಿ.ಐ)ವು ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳ ಅಡಿಯ ಅಪರಾಧಗಳಿಗೆ ಪ್ರಕರಣ ದಾಖಲಿಸಿದ್ದು, ಅದನ್ನು ಪ್ರಶ್ನಿಸಿ ಈ ಪ್ರಕರಣ ದಾಖಲಿಸಲಾಗಿದೆ.

ಅರ್ಜಿದಾರನು ಸಾರ್ವಜನಿಕ ವರದಾ ಗ್ರಾಮೀಣ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ, ಬ್ಯಾಂಕಿನ ನಿಯಮಗಳನ್ನು ಉಲ್ಲಂಘಿಸಿ ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿ ಬ್ಯಾಂಕನ್ನು ಮೋಸಗೊಳಿಸಿ ಸಾರ್ವಜನಿಕ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ.

ದಂಡ ಪ್ರಕ್ರಿಯಾ ಸಂಹಿತೆಯ ನಿಯಮ 173(5)ರ ಅಡಿ ದಾಖಲಾತಿಗಳನ್ನು ಪ್ರಾಸಿಕ್ಯೂಷನ್ನಿನ ಕೇಸನ್ನು ಬಲಪಡಿಸಲು ಬಳಸಬಹುದಾಗಿದೆ ಎಂಬ ಸಿಬಿಐನ ವಾದವನ್ನು ಎತ್ತಿ ಹಿಡಿದಿದೆ. ಈ ಕಾನೂನಿನ ಪ್ರಶ್ನೆಯ ಕುರಿತು ಸರ್ವೋಚ್ಚ ನ್ಯಾಯಾಲಯವು *ನತಾಶ್ ಸಿಂಗ್ –ವಿರುದ್ಧ– ಸಿಬಿಐ (2013 ಎಸ್ಎಆರ್ (ಕ್ರಿ) 629,* ಪ್ರಕರಣದಲ್ಲಿ ನೀಡಿದ ನಿರ್ದೇಶನಗಳನ್ನು ಗಮನಿಸಿದೆ.

ಹಾಗೆಯೇ ಸರ್ವೋಚ್ಚ ನ್ಯಾಯಾಲಯವು *ರಾಜಾರಾಮ್ ಪ್ರಸಾದ್ ಯಾದವ್ –ವಿರುದ್ಧ– ಬಿಹಾರ ರಾಜ್ಯ* (ಎಸ್ಎಲ್‌ಪಿ (ಕ್ರಿ) 2400/2011) ಪ್ರಕರಣದಲ್ಲಿ ನೀಡಿದ ನಿರ್ದೇಶನಗಳನ್ನೂ ಸಹ ಪರಿಗಣಿಸಿ, ಪ್ರಾಸಿಕ್ಯೂಷನ್ನಿನ ವಾದವನ್ನು ಎತ್ತಿ ಹಿಡಿದಿದೆ.

*ಕ್ರಿಮಿನಲ್ ಅರ್ಜಿ ಸಂ. 100110/2014, ದಿನಾಂಕ: 1ನೇ ಏಪ್ರಿಲ್, 2014.

ಅಲ್ಲದೆ ಇನ್ನು ಎರಡು ಮಹತ್ವದ ಪ್ರಕರಣಗಳಾದ ಸಿಬಿಐ –ವಿರುದ್ಧ– ಆರ್.ಎಸ್.ಪೈ ಮತ್ತು ಮತ್ತೊಬ್ಬರು (ಎಐಆರ್ 2002 ಎಸ್‌ಸಿ 1644) ಮತ್ತು ಓಂಪ್ರಕಾಶ್ ನಾರಂಗ್ –ವಿರುದ್ಧ– ರಾಜ್ಯ (ದೆಹಲಿ ಆಡಳಿತ) (ಎಐಆರ್ 1979 ಎಸ್‌ಸಿ 1791) ಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಾಖಲಾತಿಗಳನ್ನು ಹಾಜರು ಮಾಡುವ ಪ್ರಕ್ರಿಯೆ ಮತ್ತು ತನಿಖಾಧಿಕಾರಿಯ ಅಧಿಕಾರ ಇತ್ಯಾದಿ ಕುರಿತು ಸೂಕ್ತ ನಿರ್ದೇಶನಗಳನ್ನು ನೀಡಿದೆ.

ಈ ಎಲ್ಲಾ ಪ್ರಕರಣಗಳ ನಿರ್ದೇಶನದ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು ಪ್ರಾಸಿಕ್ಯೂಷನ್‌ನ ವಾದವನ್ನು ಎತ್ತಿಹಿಡಿದು ಸಾಕ್ಷಿಯ ದಾಖಲಾತಿಗಳನ್ನು ಪರಿಶೀಲಿಸುವಾಗ ಕೆಳ ನ್ಯಾಯಾಲಯವು ಸಣ್ಣ ಪುಟ್ಟ ತಪ್ಪುಗಳನ್ನು ಪರಿಗಣಿಸದೆ ಸಾಕ್ಷಿ ಮತ್ತು ದಾಖಲಾತಿಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಅಭಿಪ್ರಾಯಪಟ್ಟು, ಪ್ರಸ್ತುತ ಪ್ರಕರಣವನ್ನು ತಿರಸ್ಕರಿಸಿ ಆದೇಶಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 2013 ಎಸ್‌ಎಆರ್ (ಕ್ರಿ) 629* | |
| *ನತಾಶ್ ಸಿಂಗ್ –ವಿರುದ್ಧ– ಸಿಬಿಐ* | *(ಉಲ್ಲೇ) 7* |
| *2. ಎಸ್‌ಎಲ್‌ಪಿ (ಸಿಆರ್‌ಐ) ಸಂ. 2400/2011* | |
| *ರಾಜಾರಾಮ್ ಪ್ರಸಾದ್ ಯಾದವ್* | |
| *–ವಿರುದ್ಧ– ಬಿಹಾರ ರಾಜ್ಯ ಮತ್ತು ಮತ್ತೊಬ್ಬರು* | *(ಉಲ್ಲೇ) 12* |
| *3. ಎಐಆರ್ 2002 ಎಸ್‌ಸಿ 1644* | |
| *ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್* | |
| *–ವಿರುದ್ಧ– ಆರ್.ಎಸ್. ಪೈ ಮತ್ತು ಮತ್ತೊಬ್ಬರು* | *(ಉಲ್ಲೇ) 15* |
| *4. ಎಐಆರ್ 1979 ಎಸ್‌ಸಿ 1791* | |
| *ಓಂ ಪ್ರಕಾಶ್ ನಾರಂಗ್ –ವಿರುದ್ಧ–* | |
| *ರಾಜ್ಯ (ದೆಹಲಿ ಆಡಳಿತ)* | *(ಉಲ್ಲೇ) 16* |

ಅರ್ಜಿದಾರರ ಪರ: ಶ್ರೀ ಎ.ಸಿ. ಮುರದ್, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಎಂ.ಬಿ. ಕಣವಿ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 311ನೇ ಪ್ರಕರಣದೊಂದಿಗೆ ಓದಲಾದ 173(5)(8)ನೇ ಪ್ರಕರಣದಡಿಯಲ್ಲಿ ಪ್ರಾಸಿಕ್ಯೂಷನ್ನು ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಿ ವಿಶೇಷ (ಸಿಬಿಐ) ಸಿ.ಸಿ. ಸಂಖ್ಯೆ 1/2013ರಲ್ಲಿ ಧಾರವಾಡದಲ್ಲಿ ಸಿಬಿಐ ಪ್ರಕರಣಗಳಿಗೆ ಸಂಬಂಧಿಸಿದಂತೆ IIIನೇ ಹೆಚ್ಚುವರಿ ಸೆಷನ್ಸ್ ಮತ್ತು ವಿಶೇಷ ನ್ಯಾಯಾಧೀಶರು ಹೊರಡಿಸಿದ ದಿನಾಂಕ 23.12.2013ರಂದು ನೀಡಿದ ಆದೇಶವನ್ನು ರದ್ದುಪಡಿಸಲು ಕೋರಿ, ಪ್ರಸ್ತುತ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

2. ಈ ಅರ್ಜಿಯನ್ನು ಸಲ್ಲಿಸಲು ಕಾರಣವಾಗಿರುವಂಥ ದಾಖಲೆಗಳಲ್ಲಿರುವ ಸಮರ್ಥವಾದ, ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

ಸಿಬಿಐ, ಎಸಿಬಿ, ಬೆಂಗಳೂರು, ಭಾರತ ದಂಡ ಸಂಹಿತೆ, 1860ರ 420, 471, 409, 477-ಎ 201ನೇ ಪ್ರಕರಣಗಳೊಂದಿಗೆ 120-ಬಿ ಪ್ರಕರಣದಡಿಯಲ್ಲಿ ಅಲ್ಲದೆ ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮದ 13(2) ಪ್ರಕರಣದೊಂದಿಗೆ ಓದಲಾದ 13(1)ರ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ ಅರ್ಜಿದಾರರು (ಎ1) ಮತ್ತು ಇತರರು ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತದೆ. ಯುಕ್ತ ತನಿಖೆಯ ತರುವಾಯ, ತನಿಖಾಧಿಕಾರಿಗಳು ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾರೆ. ಇದನ್ನು ಒಪ್ಪಿಸಿದ ತರುವಾಯ, ಮೊಕದ್ದಮ್ಮೆಯನ್ನು ಧಾರವಾಡದಲ್ಲಿ ಸಿಬಿಐ ಪ್ರಕರಣಗಳಿಗೆ ಸಂಬಂಧಿಸಿದ IIIನೇ ಹೆಚ್ಚುವರಿ ಸೆಷನ್ಸ್ ಮತ್ತು ವಿಶೇಷ ನ್ಯಾಯಾಧೀಶರು ಕೈಗೆತ್ತಿಕೊಂಡಿರುತ್ತಾರೆ.

3. ಅರ್ಜಿದಾರನು 1995ರಿಂದ 1998ನೇ ಅವಧಿಯ ವರ್ಷಗಳಲ್ಲಿ ವರದಾ ಗ್ರಾಮೀಣ ಬ್ಯಾಂಕ್‌ನಲ್ಲಿ ಗುಮಾಸ್ತನಾಗಿ ಕಾರ್ಯ ನಿರ್ವಹಿಸುತ್ತಿರುವಾಗ, ಈತನನ್ನು ಕಾರವಾರ ತಾಲ್ಲೂಕಿನ ಗೋಟೆಹಳ್ಳಿಯಲ್ಲಿನ ವರದಾ ಗ್ರಾಮೀಣ ಬ್ಯಾಂಕ್‌ನ ವಿಸ್ತರಣಾ ಕೌಂಟರ್‌ನ ಪ್ರಭಾರದಲ್ಲಿಟ್ಟಿರುತ್ತಾರೆ. ಆಗ ಈತ ಇತರೆ ಆಪಾದಿತ ವ್ಯಕ್ತಿಗಳೊಂದಿಗೆ ಷಾಮೀಲಾಗಿ, ಸುಳ್ಳು ದಸ್ತಾವೇಜುಗಳನ್ನು ಸರಿಯಾದವುಗಳೆಂಬಂತೆ ಹಾಗೂ ತಪ್ಪು ಲೆಕ್ಕ ಪತ್ರಗಳನ್ನು ಸೃಜಿಸಿ, ಬ್ಯಾಂಕಿಗೆ ವಂಚಿಸಿ ಕ್ರಿಮಿನಲ್ ಒಳಸಂಚನ್ನು ರೂಪಿಸಿರುತ್ತಾನೆಂಬುದು ಇವರ ವಿರುದ್ಧ ಮಾಡಿರುವ ಆರೋಪಗಳಾಗಿರುತ್ತವೆ. ಈತ, ತನ್ನ ಸ್ವಂತ ಲೆಕ್ಕ ಖಾತೆ, ಎ2 ರಿಂದ ಎ4ರ ವರೆಗಿನ ಲೆಕ್ಕ ಖಾತೆಗಳಿಗೆ ಅಲ್ಲದೆ ಈತನ ಪತ್ನಿಯ ಲೆಕ್ಕಖಾತೆಗೂ ಬಡ್ಡಿ ಠೇವಣಿಗಳ ಶೀರ್ಷಿಕೆಗಳಿಂದ ಬ್ಯಾಂಕ್‌ನ ನಿಧಿಯನ್ನು ಮೋಸದಿಂದ ತುಂಬಿಸಿರುತ್ತಾನೆ ಮತ್ತು ಮತ್ತೊಬ್ಬ ಆಪಾದಿತನ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ 34,60,643/– ರೂ.ಗಳನ್ನು ಲಪಟಾಯಿಸಿರುತ್ತಾನೆ. ತನಿಖೆಯ ಸಮಯದಲ್ಲಿ ತನಿಖಾಧಿಕಾರಿಗಳು, ಕೆಲವು ವಿತ್‌ಡ್ರಾಯಲ್ ಸ್ಲಿಪ್‌ಗಳು, ಕ್ರೆಡಿಟ್ ಸ್ಲಿಪ್‌ಗಳು, ಪೇ–ಇನ್–ಸ್ಲಿಪ್‌ಗಳು ಮುಂತಾದವುಗಳನ್ನು ವಶಪಡಿಸಿಕೊಂಡು ಸಂಗ್ರಹಿಸಿಟ್ಟು ಕೊಂಡದ್ದು ಕಂಡುಬರುತ್ತದೆ. ಅಂಥ ದಸ್ತಾವೇಜುಗಳ ಮೇಲಿನ ಸಹಿಗಳನ್ನು ಆಪಾದಿತ –1 ಇವರು ನನ್ನವಲ್ಲವೆಂದು ನಿರಾಕರಿಸಿರುತ್ತಾರೆ. ತನಿಖೆಯ ಅವಧಿಯಲ್ಲಿ, ಈ ದಸ್ತಾವೇಜುಗಳ ಮೇಲಿರುವ ಸಹಿಯು ಎ1 ಮಾಡಿರುವ ಸಹಿಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಅವುಗಳನ್ನು ಕೈಬರಹ ತಜ್ಞರಿಗೆ ಕಳುಹಿಸಿರುವುದಿಲ್ಲವೆಂಬುದು ವಿವಾದಾತೀತ ಅಂಶವಾಗಿರುತ್ತದೆ. ಎ1, ಅನಕ್ಷರಸ್ಥ ಅಥವಾ ಅರೆ ಅಕ್ಷರಸ್ಥ ಗ್ರಾಹಕರಿಗೆ ಸಂಬಂಧಿಸಿದ ವಿತ್‌ಡ್ರಾಯಲ್ ಸ್ಲಿಪ್ಸ್, ಕ್ರೆಡಿಟ್ ಸ್ಲಿಪ್ಸ್ ಮತ್ತು ಪೇ –ಇನ್– ಸ್ಲಿಪ್‌ಗಳನ್ನು ಬಳಸಿರುತ್ತಾರೆಂಬುದು ಅವರ ಮೇಲಿರುವ ಇನ್ನೊಂದು ಆಪಾದನೆಯಾಗಿರುತ್ತದೆ. ಆರೋಪಗಳನ್ನು ರೂಪಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು ಅಧಿವಿಚಾರಣೆಯನ್ನು ಪೂರ್ಣಗೊಳಿಸುತ್ತದೆ. ಅಲ್ಲದೆ, ವಾದ ವಿವಾದಗಳ ಸಮಯದಲ್ಲಿ, ಎ1ರ ವಿವಾದಿತ ಸಹಿಯನ್ನು ದೃಢೀಕರಣವನ್ನು ಪಡೆಯುವ ಸಲುವಾಗಿ ತಜ್ಞರಿಗೆ ಈ ವಿವಾದಿತ ಕ್ರೆಡಿಟ್ ಸ್ಲಿಪ್‌ಗಳು/ವಿತ್‌ಡ್ರಾಯಲ್ ಸ್ಲಿಪ್‌ಗಳು ಮತ್ತು ಪೇ–ಇನ್ – ಸ್ಲಿಪ್‌ಗಳನ್ನು ಕಳುಹಿಸುವ ತೊಂದರೆಯನ್ನು ತನಿಖಾಧಿಕಾರಿಗಳು ತೆಗೆದುಕೊಂಡಿರುವುದಿಲ್ಲವೆಂದು ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು

ನ್ಯಾಯಾಲಯದ ಗಮನಕ್ಕೆ ತಂದಿರುವುದನ್ನು ವಾದ–ವಿವಾದಗಳ ಸಮಯದಲ್ಲಿ ಆಲಿಸಿರುತ್ತವೆ. ಮಾನ್ಯ ವಕೀಲರ ಸದರಿ ವಾದ ವಿವಾದದಿಂದ ತಿಳಿದುಬಂದಿರುವುದೇನೆಂದರೆ, ಸಿಬಿಐನ ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು, ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ), ಕಾರವಾರದ ಕಡತದ ಮೇಲಿನ ಒಎಸ್ ಸಂ.20/2001 ಯಲ್ಲಿನ ಸಿವಿಲ್ ಪ್ರಕರಣದಲ್ಲಿ ಈ ಮೂರು ದಸ್ತಾವೇಜುಗಳನ್ನು ವಾಸ್ತವಿಕವಾಗಿ ಪರಿಶೀಲಿಸಿದಂಥ ತಜ್ಞರ ಸಾಕ್ಷ್ಯವನ್ನು ಸುರಕ್ಷಿತವಾಗಿಡಲು ನ್ಯಾಯಾಲಯದ ವಿಶೇಷಾಧಿಕಾರವನ್ನು ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ಸಿಬಿಐ ಪರ ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅರ್ಜಿ ಸಲ್ಲಿಸಿರುತ್ತಾರೆಂಬುದಾಗಿರುತ್ತದೆ. ಮಾನ್ಯ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಸದರಿ ಅರ್ಜಿಯನ್ನು ವಜಾ ಮಾಡಿ, ಕೈಬರಹ ಅಥವಾ ಬೆರಳೊತ್ತು ತಜ್ಞರನ್ನು ಸಮನು ಮಾಡುವುದನ್ನು ಹಾಗೂ ಸದರಿ ದಸ್ತಾವೇಜು ಮತ್ತು ತಜ್ಞರ ವರದಿಯನ್ನು ಪ್ರಾಸಿಕ್ಯೂಷನ್‌ನಿಂದ ನ್ಯಾಯಾಲಯದ ಮುಂದೆ ಮಂಡಿಸುವಂತಿಲ್ಲವೆಂಬ ಆಧಾರದ ಮೇಲೆ ಒ.ಎಸ್.ಸಂ.20/2001ರಲ್ಲಿ ಸಲ್ಲಿಸಿದ ಸದರಿ ದಸ್ತಾವೇಜುಗಳನ್ನು ಪರಿಶೀಲಿಸಲು ನಿರಾಕರಿಸಿರುತ್ತಾರೆ. ಮುಂದುವರೆದು, ಈ ದೋಷವನ್ನು ಪರಿಹರಿಸಲು, ತಜ್ಞರ ಸದರಿ ದಸ್ತಾವೇಜು ಹಾಗೂ ವರದಿಯನ್ನು ಸುರಕ್ಷಿತವಾಗಿಡಲು, ಅಲ್ಲದೆ ಸಾಕ್ಷ್ಯ ನೀಡುವ ಉದ್ದೇಶಕ್ಕಾಗಿ ನ್ಯಾಯಾಲಯದ ಎದುರು ಸದರಿ ತಜ್ಞರನ್ನು ಸಮನು ಮಾಡಲು ನ್ಯಾಯಾಲಯದ ವಿಶೇಷಾಧಿಕಾರವನ್ನು ಕೋರಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದೊಂದಿಗೆ ಓದಲಾದ 173(5) ಮತ್ತು (8)ನೇ ಪ್ರಕರಣದಡಿಯಲ್ಲಿ ಮತ್ತೊಂದು ಅರ್ಜಿಯನ್ನು ಸಲ್ಲಿಸಲಾಗಿದೆಯೆಂಬುದು ಕಂಡು ಬಂದಿರುತ್ತದೆ. ಮೇಲಿನ ಸದರಿ ಉಪಬಂಧಗಳಡಿಯಲ್ಲಿ ಸಲ್ಲಿಸಿದ ಎರಡನೇ ಅರ್ಜಿಯ ಮಟ್ಟಿಗೆ ಇದು ಎ1 ಗಂಭೀರವಾಗಿ ಪ್ರಶ್ನಿಸಿರುವುದಕ್ಕೆ ಸಂಬಂಧಿಸಿರುವುದಾಗಿರುತ್ತದೆ. ಸಿಬಿಐನ ಮಾನ್ಯ ವಿಶೇಷ ನ್ಯಾಯಾಧೀಶರು, ತಮ್ಮ ಕಳಕಳಿಯ ಪರಿಗಣನೆಯನ್ನು ನೀಡಿದ ತರುವಾಯ, ಆಪಾದಿತರು ಪ್ರಸ್ತಾಪಿಸಿದ ವಾದದ ಮಟ್ಟಿಗೆ, ಸದರಿ ಅರ್ಜಿಯನ್ನು ಅಂಗೀಕರಿಸಿ, ಕೈಬರಹ ತಜ್ಞರನ್ನು ಸಮನು ಮಾಡುವ ಮೂಲಕ ಹೆಚ್ಚಿನ ಸಾಕ್ಷ್ಯವನ್ನು ತರಿಸಿಕೊಳ್ಳಲು, ಅಲ್ಲದೆ, ಮೇಲೆ ಹೇಳಿದ ವಿವಾದಿತ ದಸ್ತಾವೇಜುಗಳ ಮೇಲೆ ಕೈ–ಬರಹ ತಜ್ಞರ

ವರದಿಯ ಸಂಬಂಧದಲ್ಲಿ ಸಾಕ್ಷ್ಯವನ್ನು ತರಿಸಿಕೊಳ್ಳಲು ಪ್ರಾಸಿಕ್ಯೂಷನ್‌ಗೆ ಅನುಮತಿಸಿರುತ್ತಾರೆ.

4. ಒ.ಎಸ್.ಸಂ. 20/2001 ಸಿವಿಲ್ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವಾಗ, ಸಿವಿಲ್ ನ್ಯಾಯಾಲಯವು, ದಾವೆಯ ನ್ಯಾಯ ನಿರ್ಣಯದ ಉದ್ದೇಶಕ್ಕಾಗಿ ಸಿಬಿಐ ನ್ಯಾಯಾಲಯದಿಂದ ಕೆಲವು ದಸ್ತಾವೇಜುಗಳನ್ನು ಸಮನು ಮಾಡಿದೆಯೆಂಬುದು ಕಂಡು ಬರುತ್ತಿರುವ ವಾಸ್ತವಾಂಶದಲ್ಲಿ ಯಾವುದೇ ವಿವಾದವಿರುವುದಿಲ್ಲ. ಸಿಬಿಐ ನ್ಯಾಯಾಲಯವು ನಿಶಾನೆ ಪಿ.25, ಪಿ.47 ಮತ್ತು ಪಿ.54ಯೆಂದು ಗುರುತು ಮಾಡಿರುವಂಥ ದಸ್ತಾವೇಜುಗಳನ್ನು ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಿರುತ್ತದೆ. ಪಕ್ಷಕಾರರನ್ನು ಸುನಾವಣೆ ಮಾಡಿದ ಮೇಲೆ, ಸದರಿ ಪ್ರಕರಣದಲ್ಲಿನ ವಾದಿಯ ಸಂದರ್ಭದಲ್ಲಿ ಸಿವಿಲ್ ನ್ಯಾಯಾಲಯವು ಕೈ ಬರಹ ತಜ್ಞರಿಗೆ ಸದರಿ ದಸ್ತಾವೇಜುಗಳನ್ನು ಉಲ್ಲೇಖಿಸಿರುವುದು ತಿಳಿದುಬರುತ್ತದೆ. ಆ ತರುವಾಯ, ಕೈಬರಹ ತಜ್ಞನು ತನ್ನ ವರದಿಯನ್ನು ಒದಗಿಸಿರುತ್ತಾನೆ. ಸಿಬಿಐ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಿಂತಿರುಗಿಸುವಾಗ, ಕಣ್ತಪ್ಪಿನಿಂದಾಗಿಯೋ ಅಥವಾ ನಿರ್ಲಕ್ಷ್ಯದಿಂದಲೋ ಕೈಬರಹ ತಜ್ಞರ ವರದಿಯೊಂದಿಗೆ ಈ ದಸ್ತಾವೇಜುಗಳನ್ನು ಸಿಬಿಐ ನ್ಯಾಯಾಲಯಕ್ಕೆ ಕಳುಹಿಸಲಾಗಿರುತ್ತದೆ. ಈ ಸಮಯದಲ್ಲಿ, ಸಿಬಿಐ ನ್ಯಾಯಾಲಯಕ್ಕೆ ಹೊಂದಿಕೊಂಡಿರುವಂಥ ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಈ ದಸ್ತಾವೇಜುಗಳನ್ನು ಗಮನಿಸಿರುತ್ತಾರೆ ಮತ್ತು ಆ ವರದಿಯನ್ನು ಸಲ್ಲಿಸಲು ಹಾಗೂ ವರದಿಯು ಪ್ರಾಸಿಕ್ಯೂಷನ್‌ಗೆ ಪರವಾಗಿದೆಯೆಂದು ಕೈಬರಹ ತಜ್ಞರನ್ನು ಪರೀಕ್ಷಿಸಲು ಪ್ರಯತ್ನಿಸಿರುತ್ತಾರೆಂಬುದು ಕಂಡು ಬರುತ್ತದೆ.

5. ಅರ್ಜಿದಾರರು/ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು, ದಸ್ತಾವೇಜುಗಳನ್ನು ತನಿಖೆಯ ಅವಧಿಯಲ್ಲಿ ಸುರಕ್ಷಿತವಾಗಿಡಲು ಇಲ್ಲವೇ ಅಂಥ ದಸ್ತಾವೇಜುಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ಕೈ ಬರಹ ತಜ್ಞರ ವರದಿಯನ್ನು ಸುರಕ್ಷಿತವಾಗಿಡುವ ಪ್ರಯತ್ನವನ್ನಾಗಲೀ ತನಿಖಾಧಿಕಾರಿಯು ಮಾಡಿರುವುದಿಲ್ಲವೆಂದು ವಾದಿಸಿರುತ್ತಾರೆ. ಸಿವಿಲ್ ನ್ಯಾಯಾಲಯದಿಂದ ಕೈ-ಬರಹ ತಜ್ಞರಿಗೆ ಈ ದಸ್ತಾವೇಜುಗಳನ್ನು ಕಳುಹಿಸಲಾಗಿದೆಯೆಂಬುದು ತಿಳಿದು ಬಂದ ತರುವಾಯ,

ತನಿಖೆಯ ಲೋಪಗಳನ್ನು ಮುಚ್ಚಿಟ್ಟುಕೊಳ್ಳುವ ಸಲುವಾಗಿ, ಸಿಬಿಐ ನ್ಯಾಯಾಲಯದ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಈತ ಸದರಿ ದಸ್ತಾವೇಜುಗಳ ಅನುಮತಿ ಪಡೆದುಕೊಳ್ಳುವಂತೆ ಹಾಗೂ ಸದರಿ ದಸ್ತಾವೇಜುಗಳನ್ನು ಹೆಚ್ಚುವರಿ ಸಾಕ್ಷ್ಯಗಳಾಗಿ ಬಳಸಿಕೊಳ್ಳುವಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಮತ್ತು (8)ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಪ್ರಾಸಿಕ್ಯೂಟಿಂಗ್ ಏಜೆನ್ಸಿಯ ಈ ನಡೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಏಕೆಂದರೆ ಇದು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5)(8) ಪ್ರಕರಣದ ಉಪಬಂಧಗಳಡಿಯಲ್ಲಿ ಬರುವುದಿಲ್ಲ.

6. ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರ–ರಾಜ್ಯದ ಪರ ಮಾನ್ಯ ನ್ಯಾಯವಾದಿಗಳು, ಇಲ್ಲಿ ಕೆಲವು ಕಾರ್ಯವಿಧಾನಗಳ ದೋಷಗಳಿದ್ದಾಗ್ಯೂ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಪ್ರಕರಣವು ಪ್ರಕರಣದ ವಸ್ತು ವಿಷಯವಾಗಿರದಂಥ ದಸ್ತಾವೇಜುಗಳ ಸಿದ್ಧಪಡಿಸುವಿಕೆಯನ್ನು ಉದ್ದೇಶಿಸಿರುವುದಿಲ್ಲ. ಆದಾಗ್ಯೂ, ಈ ದಸ್ತಾವೇಜುಗಳನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದಡಿಯಲ್ಲಿ ಪ್ರಾಸಿಕ್ಯೂಷನ್‌ನ ಪ್ರಕರಣವನ್ನು ರುಜುವಾತು ಮಾಡುವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಬಹುದಾಗಿರುತ್ತದೆ. ಮುಂದುವರೆದು, ನಿಶಾನೆ.ಪಿ.25, ಪಿ.47 ಮತ್ತು ಪಿ.54ರ ದಸ್ತಾವೇಜುಗಳು ತನಿಖೆಯ ಸಮಯದಲ್ಲಿ ಸುರಕ್ಷಿತವಾಗಿಟ್ಟಿದ್ದಂಥ ದಸ್ತಾವೇಜುಗಳಾಗಿರುತ್ತವೆ. ಮತ್ತು ಅಂಥ ದಸ್ತಾವೇಜುಗಳನ್ನು ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಲಾಗಿರುತ್ತದೆ. ಸಿವಿಲ್ ನಡಾವಳಿಯ ಸಮಯದಲ್ಲಿ ಈ ದಸ್ತಾವೇಜುಗಳನ್ನು ಪ್ರಶ್ನಿಸಲಾಗಿರುತ್ತದೆ. ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯವು ಕೈಬರಹ ತಜ್ಞರಿಗೆ ದಸ್ತಾವೇಜುಗಳನ್ನು ಉಲ್ಲೇಖಿಸಿರುತ್ತದೆ. ಆದ್ದರಿಂದ ಇದು, ಪ್ರಾಸಿಕ್ಯೂಷನ್‌ಗೆ ಮೂಲ ದಸ್ತಾವೇಜುಗಳ ಲಭ್ಯತೆಗೆ ಕಾರಣವಾಗುತ್ತದೆ. ಆದ್ದರಿಂದ ತನಿಖೆಯ ಸಮಯದಲ್ಲಿಯಾಗಲೀ ಅಥವಾ ತರುವಾಯವಾಗಲೀ ಅಂಥ ದಸ್ತಾವೇಜುಗಳನ್ನು ಕೈಬರಹ ತಜ್ಞರು ಪರೀಕ್ಷಿಸಿದ್ದಲ್ಲಿ, ಇದರಿಂದ ಯಾವುದೇ ವ್ಯತ್ಯಾಸ ಉಂಟಾಗುವುದಿಲ್ಲ. ಆಪಾದಿತನ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಿಕೊಳ್ಳುವ ಉದ್ದೇಶಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ನ್ಯಾಯಾಲಯದ ಮುಂದೆ ಅವುಗಳನ್ನು ಹಾಜರುಪಡಿಸಬಹುದಾಗಿರುತ್ತದೆ. ಆದ್ದರಿಂದ ನ್ಯಾಯಾಲಯವು, ನ್ಯಾಯವನ್ನು ನೀಡುವ ದೃಷ್ಟಿಯಿಂದ ಯಾವುದೇ ದಸ್ತಾವೇಜುಗಳನ್ನು ಸಮನು

ಮಾಡಬಹುದಾದ, ತೀರ್ಪನ್ನು ಉಚ್ಚರಿಸುವ ಮೊದಲು ಯಾವುದೇ ಸಮಯದಲ್ಲಿ ಯಾವುದೇ ಸಾಕ್ಷ್ಯವನ್ನು ಪರೀಕ್ಷಿಸಬಹುದಾದ ವಿಫುಲ ಅಧಿಕಾರಗಳನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದ ಓದಿನೊಂದಿಗೆ ಮೇಲಿನ ಸದರಿ ಉಪಬಂಧಗಳಡಿಯಲ್ಲಿ ಹೊಂದಿರುತ್ತದೆ. ಆದ್ದರಿಂದ, ಪ್ರಸ್ತುತ ಅರ್ಜಿಯಲ್ಲಿ ಯಾವುದೇ ಹುರುಳಿರುವುದಿಲ್ಲವೆಂದು ವಾದಿಸಿ, ಮಾನ್ಯ ವಿಶೇಷ ನ್ಯಾಯಾಧೀಶರು ಹೊರಡಿಸಿರುವ ಆದೇಶವನ್ನು ಎತ್ತಿ ಹಿಡಿಯಬೇಕಾಗಿರುತ್ತದೆ.

7. ಅಧಿವಿಚಾರಣಾ ನ್ಯಾಯಾಲಯವು, ಅರ್ಜಿಯನ್ನು ಅಂಗೀಕರಿಸಬೇಕಾಗುತ್ತದೆಂಬ ಅಭಿಪ್ರಾಯಕ್ಕೆ ಬರುವ ದೃಷ್ಟಿಯಿಂದ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿನ ಉಪಬಂಧವನ್ನು, ಅಲ್ಲದೆ, ***ನತಾಶ್ ಸಿಂಗ್ –ವಿರುದ್ಧ– ಸಿಬಿಐ***[1] ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಯಾವುದೇ ವಿಚಾರಣೆಯ ಯಾವುದೇ ಹಂತದಲ್ಲಿ ಅಥವಾ ಅಧಿವಿಚಾರಣೆ ಅಥವಾ ಯಾವುದೇ ಇತರೆ ವ್ಯವಹರಣೆಗಳಲ್ಲಿ ಯಾವುದೇ ಸಾಕ್ಷ್ಯವನ್ನು ಸಮನು ಮಾಡಬಹುದು ಅಥವಾ ಪ್ರತ್ಯರ್ಜಿದಾರ ಈಗಾಗಲೇ ತನಿಖೆಗೆ ಒಳಪಟ್ಟಂಥ ಯಾರೇ ವ್ಯಕ್ತಿಯನ್ನು ಮತ್ತೊಮ್ಮೆ ತನಿಖೆಗಾಗಿ ಕರೆಯಬಹುದು, ಆದರೆ ಸದರಿ ಸಾಕ್ಷ್ಯದ ತನಿಖೆಯು, ನ್ಯಾಯ ನಿರ್ಣಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆಂಬ ಮಾರ್ಗದರ್ಶಿ ಸೂತ್ರಗಳನ್ನು ನೀಡಿರುತ್ತದೆಂಬುದನ್ನು ಉದಾಹರಿಸಿರುತ್ತದೆ. ಮೇಲಿನ ಪ್ರಕರಣವು ಈ ಸಂಬಂಧಲ್ಲಿ ನ್ಯಾಯಾಲಯದ ಮೇಲೆ ತುಂಬಾ ವ್ಯಾಪಕವಾದ ವಿವೇಚನಾಧಿಕಾರವನ್ನು ಪ್ರದತ್ತಗೊಳಿಸುತ್ತದೆ. ಆದರೆ ಅಂಥ ವಿವೇಚನೆಯನ್ನು ನ್ಯಾಯಯುತವಾಗಿ ಚಲಾಯಿಸಬೇಕೆ ಹೊರತು ನಿರಂಕುಶವಾಗಿಯಲ್ಲ. ಅಲ್ಲದೆ, ಸರ್ವೋಚ್ಚ ನ್ಯಾಯಾಲಯವೂ, ಪರಿಸ್ಥಿತಿಯನ್ನು ಹೇಗೆ ತನಿಖೆ ಮಾಡಬೇಕು ಎಂಬುದನ್ನೂ ಸಹ ಅಂದರೆ, ಸೂಕ್ತ ವಾಸ್ತವಾಂಶಗಳನ್ನು ಕಂಡುಕೊಂಡ ತರುವಾಯ ನ್ಯಾಯಯುತವಾಗಿ ತೀರ್ಪನ್ನು ನೀಡಲು, ಸತ್ಯವನ್ನು ನಿರ್ಧರಿಸಲು ನ್ಯಾಯಾಲಯವನ್ನು ಸಮರ್ಥಗೊಳಿಸಲು ನ್ಯಾಯಾಲಯವು ವಾಸ್ತವಾಂಶವನ್ನು ಅರ್ಥೈಸಿ ಕೊಳ್ಳಬೇಕಾಗುತ್ತದೆಂದೂ ಹಾಗೂ ತೀರ್ಮಾನಕ್ಕೆ ಬರಲು ಅಂಥ ವಾಸ್ತವಾಂಶಗಳ

1. 2013ಎಸ್‌ಸಿಆರ್ (ಕ್ರಿ) 629

ಸರಿಯಾದ ಆಧಾರವನ್ನು ಪಡೆದುಕೊಳ್ಳಬೇಕಾಗುತ್ತದೆಂದೂ ಸಹ ಅಭಿಪ್ರಾಯಪಟ್ಟಿರುತ್ತದೆ. ಅದ್ದರಿಂದ, ನ್ಯಾಯಾಲಯವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ, ಅಧಿಕಾರಗಳನ್ನು ಚಲಾಯಿಸುವಾಗ, ಪ್ರಾಸಿಕ್ಯೂಷನ್ ಅಥವಾ ರಕ್ಷಣಾ ಪ್ರಕರಣಗಳಲ್ಲಿನ ಲೋಪವನ್ನು ಸರಿಪಡಿಸಲು ಪಕ್ಷಕಾರರನ್ನು ಅನುಮತಿಸುವಂತಿರುವುದಿಲ್ಲ ಮತ್ತು ರಕ್ಷಣೆಗೆ ಗಂಭೀರವಾಗಿ ಬಾಧಕವುಂಟಾಗುವ ಆಪಾದಿತನ ಅನಾನುಕೂಲತೆಗೆ ಇದನ್ನು ಜಾರಿಗೊಳಿಸುವಂತಿಲ್ಲ. ಹಾಗಾಗಿ ಹೊಸ ಸಾಕ್ಷ್ಯವನ್ನು ಪಡೆದುಕೊಳ್ಳಬೇಕಾದುದು, ಪ್ರಕರಣದ ನ್ಯಾಯಯುತ ತೀರ್ಮಾನಕ್ಕೆ ಅವಶ್ಯಕವಾಗಿದ್ದಲ್ಲಿ ತಪ್ಪಿಸಿಕೊಳ್ಳಲು ಸಾಧ್ಯವೇ ಇರುವುದಿಲ್ಲ.

8. ಮೇಲಿನ ಸದರಿ ತೀರ್ಮಾನದಲ್ಲಿ ಮಾನ್ಯ ನ್ಯಾಯವಾದಿಗಳು ರೂಪಿಸಿರುವ ಅಭಿಪ್ರಾಯಗಳ ಜೊತೆಗೆ, ಈ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಅಥವಾ 8ರ ಪ್ರಕರಣಗಳ ವಾಸ್ತವಾಂಶಗಳು ಮತ್ತು ಪರಿಶೀಲನೆಯ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಅರ್ಜಿದಾರರು (ಪ್ರಾಸಿಕ್ಯೂಟಿಂಗ್ ಏಜೆನ್ಸಿ) ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಲು ಒಪ್ಪಿಕೊಳ್ಳಲಾಗಿದೆಯೆಂದು ಅದು ತೀರ್ಮಾನಕ್ಕೆ ಬಂದಿರುವುದರಲ್ಲಿ ಏನಾದರೂ ದೋಷವಿದೆಯೇ ಎಂಬುದನ್ನು ಗಮನಿಸಬೇಕಾಗಿರುತ್ತದೆ.

9. ಮೇಲಿನ ಸಂದರ್ಭಗಳ ಹಿನ್ನೆಲೆಯಲ್ಲಿ ದಾಖಲೆಗಳ ಮೇಲೆ ಲಭ್ಯವಿರುವ ಮಾಹಿತಿಗಳನ್ನು ಗಮನಿಸಬೇಕಾಗಿರುವುದು ಈ ನ್ಯಾಯಾಲಯಕ್ಕೆ ಸರಿಯಾದ ಮತ್ತು ಅವಶ್ಯಕವಾದ ಕ್ರಮವಾಗಿರುತ್ತದೆ. ವಾಸ್ತವಾಂಶದಲ್ಲಿನ ಸದರಿ ವಾಸ್ತವಿಕ ಆಯಾಮಗಳಲ್ಲಿ ಯಾವುದೇ ವಿವಾದವಿರುವುದಿಲ್ಲ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಅಥವಾ 173(8) ಪ್ರಕರಣವು ಅನ್ವಯವಾಗುವುದಿಲ್ಲ ಮತ್ತು ಅಂಥ ದಸ್ತಾವೇಜುಗಳನ್ನು, ನ್ಯಾಯಾಲಯದ ಮುಂದೆ ಹೆಚ್ಚುವರಿ ಆರೋಪಪಟ್ಟಿಯನ್ನು ಸಲ್ಲಿಸಬೇಕಾಗಿರುವುದರಿಂದ ತನಿಖೆಯ ಅವಧಿಯಲ್ಲಿ ಅಥವಾ ತರುವಾಯದ ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯು ಭದ್ರಪಡಿಸಿದ್ದ ದಸ್ತಾವೇಜುಗಳಂತೆ ಪರಿಗಣಿಸಬೇಕಾಗಿರುವುದಿಲ್ಲ. ಇದಕ್ಕಾಗಿ, ಮೇಲಿನ ಸದರಿ ಉಪಬಂಧಗಳನ್ನು ಗಮನಿಸಬೇಕಾಗಿರುವುದು ನ್ಯಾಯಯುತವೂ ಹಾಗೂ ಅವಶ್ಯಕವೂ ಆದುದಾಗಿರುತ್ತದೆ, ಅದು ಈ ಮುಂದಿನಂತಿರುತ್ತದೆ:–

"ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5)ನೇ ಪ್ರಕರಣ: 170ನೇ ಪ್ರಕರಣವು ಅನ್ವಯವಾಗುವಂತಹ ಮೊಕದ್ದಮೆಯ ಬಗ್ಗೆ ಅಂತಹ ವರದಿಯು ಇರುವಲ್ಲಿ, ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟನಿಗೆ ವರದಿಯ ಜೊತೆಗೆ –

(ಎ) ಅನ್ವೇಷಣೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟನಿಗೆ, ಈಗಾಗಲೇ ಕಳುಹಿಸಲಾದವುಗಳನ್ನುಳಿದು ಪ್ರಾಸಿಕ್ಯೂಷನ್ ಅವಲಂಬಿಸಲು ಉದ್ದೇಶಿಸಿರುವ ಎಲ್ಲಾ ದಸ್ತಾವೇಜುಗಳನ್ನು ಅಥವಾ ಅವುಗಳ ಸುಸಂಬದ್ಧ ಉದ್ಧೃತ ಭಾಗಗಳನ್ನು ;–

(ಬಿ) 161ನೇ ಪ್ರಕರಣದ ಮೇರೆಗೆ ಅಭಿಲೇಖಿಸಲಾಗಿದ್ದು ಪ್ರಾಸಿಕ್ಯೂಷನ್ ತನ್ನ ಸಾಕ್ಷಿಗಳನ್ನಾಗಿ ಪರೀಕ್ಷೆ ಮಾಡಲು ಉದ್ದೇಶಿರುವ ಎಲ್ಲಾ ವ್ಯಕ್ತಿಗಳ ಹೇಳಿಕೆಗಳನ್ನು ಕಳುಹಿಸತಕ್ಕುದು.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗುತ್ತದೆ:

"(8) ಈ ಪ್ರಕರಣದಲ್ಲಿರುವುದು ಯಾವುದೂ, (2)ನೇ ಒಳಪ್ರಕರಣದ ಮೇರೆಗಿನ ಒಂದು ವರದಿಯನ್ನು ಮ್ಯಾಜಿಸ್ಟ್ರೇಟನಿಗೆ ಕಳುಹಿಸಿದ ಅನಂತರ, ಅಪರಾಧದ ಬಗೆಗಿನ ಮತ್ತಷ್ಟು ಅನ್ವೇಷಣೆಯನ್ನು ಪ್ರತಿವಾದಿಸುವುದೆಂದು ಭಾವಿಸತಕ್ಕುದಲ್ಲ ಮತ್ತು ಅಂತಹ ಅನ್ವೇಷಣೆಯ ಅನಂತರ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯು ಬಾಯಿಮಾತಿನ ಅಥವಾ ಲಿಖಿತ ಮೂಲಕವಾದ ಮತ್ತಷ್ಟು ಸಾಕ್ಷ್ಯವನ್ನು ಪಡೆದಲ್ಲಿ ಅವನು ನಿಯಮಿಸಲಾದ ನಮೂನೆಯಲ್ಲಿ ಅಂಥ ಸಾಕ್ಷ್ಯಕ್ಕೆ ಸಂಬಂಧಿಸಿದ ಹೆಚ್ಚಿನ ವರದಿ ಅಥವಾ ವರದಿಗಳನ್ನು ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕುದು ಮತ್ತು (2)ರಿಂದ (6)ರವರೆಗಿನ ಒಳಪ್ರಕರಣಗಳ

ಉಪಬಂಧಗಳು, ಸಾಧ್ಯವಾದ ಮಟ್ಟಿಗೆ, ಅವು (2)ನೇ ಒಳಪ್ರಕರಣದ ಮೇರೆಗೆ ಕಳುಹಿಸಲಾದ ವರದಿಯ ಸಂಬಂಧದಲ್ಲಿ ಅನ್ವಯವಾಗುವ ಹಾಗೆಯೇ ಅಂತಹ ವರದಿಯ ಅಥವಾ ವರದಿಗಳ ಸಂಬಂಧದಲ್ಲೂ ಅನ್ವಯವಾಗತಕ್ಕದು."

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ನೇ (ಎ) ಮತ್ತು (ಬಿ) ಉಪ–ಪ್ರಕರಣಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಮಾನ್ಯ ನ್ಯಾಯವಾದಿಗಳು, ದಸ್ತಾವೇಜುಗಳು ನಿರ್ದಿಷ್ಟವಾಗಿ ಕೈಬರಹ ತಜ್ಞರ ವರದಿಯನ್ನು ತನಿಖೆಯ ಸಮಯದಲ್ಲಿ ಸಂಗ್ರಹಿಸಿಟ್ಟು ಕೊಂಡದ್ದಾಗಲೀ ಇಲ್ಲವೇ ಆರೋಪ ಪಟ್ಟಿಯನ್ನು ಸಲ್ಲಿಸುವುದಕ್ಕೆ ಮೊದಲು ಸಂಗ್ರಹಿಸಿಟ್ಟುಕೊಂಡಿದ್ದಾಗಲೀ ಆಗಿರುವುದಿಲ್ಲವೆಂಬುದನ್ನು ನನಗೆ ಯಶಸ್ವಿಯಾಗಿ ಮನವರಿಕೆ ಮಾಡಿಕೊಟ್ಟಿರುತ್ತಾರೆ. ವಾಸ್ತವಿಕವಾಗಿ, ಇದನ್ನು ಸಿವಿಲ್ ನ್ಯಾಯಾಲಯದಿಂದ ಖಂಡಿತ ಈ ಉಪಬಂಧವು, ಆರೋಪ ಪಟ್ಟಿಯನ್ನು ಸಲ್ಲಿಸಲು ತರುವಾಯದ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ವಸ್ತುವನ್ನು ಸಂಗ್ರಹಿಸಿಕೊಳ್ಳಲು ತನಿಖಾಧಿಕಾರಿಯನ್ನು ಶಕ್ತಗೊಳಿಸುತ್ತದೆ ಮತ್ತು ಆರೋಪ ಪಟ್ಟಿಯನ್ನು ಸಲ್ಲಿಸಿದ ತರುವಾಯ ಅದನ್ನು ಆತ ಸಂರಕ್ಷಿಸಿದ್ದು ಇದೆ. ಪ್ರಕರಣವು ಸಂಬಂಧಪಡುವಷ್ಟರ ಮಟ್ಟಿಗೆ ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರು ಅಂದರೆ ವಿಶೇಷ ನ್ಯಾಯಾಧೀಶರಿಗೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

10. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದ (8)ನೇ ಉಪ–ಪ್ರಕರಣವು ತನಿಖಾಧಿಕಾರಿಯು ನಡೆಸುವ ಹೆಚ್ಚಿನ ತನಿಖೆಯೊಂದಿಗೆ ವ್ಯವಹರಿಸುತ್ತದೆ. ಈತ ಆರೋಪ ಪಟ್ಟಿಯನ್ನು ದಾಖಲಿಸಿದ ತರುವಾಯ ಕೂಡ ಪ್ರಕರಣವನ್ನು ತನಿಖೆ ಮಾಡಬಹುದು ಮತ್ತು ಮ್ಯಾಜಿಸ್ಟ್ರೇಟರಿಗೆ ಇದನ್ನು ಕಳುಹಿಸುವ ಮೂಲಕ ತರುವಾಯದ ವರದಿಯನ್ನು ಸಲ್ಲಿಸಬಹುದು. ಮೌಖಿಕ ಅಥವಾ ದಸ್ತಾವೇಜೀಯ ಸಾಕ್ಷ್ಯವನ್ನು ಪಡೆಯುವಂಥ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ಗೊತ್ತುಪಡಿಸಿದ ರೀತಿಯಲ್ಲಿ ಮತ್ತು (2) ರಿಂದ (6)ರ ವರೆಗಿನ ಉಪ–ಪ್ರಕರಣಗಳ ಉಪಬಂಧಗಳಲ್ಲಿ ಅಂಥ ಸಾಕ್ಷ್ಯಕ್ಕೆ ಸಂಬಂಧಿಸಿದ ಹೆಚ್ಚಿನ ವರದಿ ಅಥವಾ ವರದಿಗಳನ್ನು ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದಾಗಿರುತ್ತದೆ. ಖಂಡಿತ ಈ

ಉಪಬಂಧವು, ಆರೋಪ ಪಟ್ಟಿಯನ್ನು ಸಲ್ಲಿಸಲು ತರುವಾಯದ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ವಸ್ತುವನ್ನು ಸಂಗ್ರಹಿಸಿಕೊಳ್ಳಲು ತನಿಖಾಧಿಕಾರಿಯನ್ನು ಶಕ್ತಗೊಳಿಸುತ್ತದೆ ಮತ್ತು ಆರೋಪ ಪಟ್ಟಿಯನ್ನು ಸಲ್ಲಿಸಿದ ತರುವಾಯ ಅದನ್ನು ಆತ ಸಂರಕ್ಷಿಸಿದ್ದು, ಪ್ರಕರಣವು ಸಂಬಂಧಪಡುವಷ್ಟರ ಮಟ್ಟಿಗೆ ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟರು ಅಂದರೆ ವಿಶೇಷ ನ್ಯಾಯಾಧೀಶರಿಗೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

11. ಅರ್ಜಿದಾರರ ಪರ ಮಾನ್ಯ ವಕೀಲರು, ಕೈ–ಬರಹ ತಜ್ಞರ ವರದಿಯೊಂದಿಗೆ ತನಿಖಾಧಿಕಾರಿಯು ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲವೆಂದು ವಾದಿಸಿರುತ್ತಾರೆ. ಈಗಷ್ಟೆ ವಾದಿಸಿದಂತೆ, ತನಿಖಾಧಿಕಾರಿಯು, ಪ್ರಕ್ರಿಯಾ ಅಕ್ರಮದಂಥ ಆದರೆ ದಸ್ತಾವೇಜುಗಳು ಅಂದರೆ ವರದಿಯು ಪ್ರಸ್ತುತ ನ್ಯಾಯಾಲಯದ ಮುಂದಿರುವಂಥ ಯಾವುದೆ ವರದಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ, ನ್ಯಾಯಾಲಯದ ಗಮನಕ್ಕೆ ವರದಿಯನ್ನು ತರುವಲ್ಲಿ ಆಗುವ ಪ್ರಕ್ರಿಯಾ ಅಕ್ರಮವು, ಯಾವುದೇ ರೀತಿಯಲ್ಲೂ, ಪ್ರಕರಣದ ಸರಿಯಾದ ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದಂತೆ ದಸ್ತಾವೇಜುಗಳನ್ನು ಗಮನಿಸಬೇಕಾದ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಲು ಅಡ್ಡಿಪಡಿಸಿರುವುದಿಲ್ಲ.

ಆದ್ದರಿಂದ ನ್ಯಾಯಾಲಯವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಮತ್ತು (8)ನೇ ಪ್ರಕರಣದಡಿಯಲ್ಲಿನ ಉಪಬಂಧಗಳ ಜೊತೆಗೆ, ಪಕ್ಷಕಾರರ ಹಕ್ಕುಗಳ ಸರಿಯಾದ ನ್ಯಾಯ ನಿರ್ಣಯದ ಉದ್ದೇಶಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯವು, ತಾನಾಗಿಯೇ ಅಂಥ ದಸ್ತಾವೇಜುಗಳನ್ನು ಪುರಸ್ಕರಿಸಬೇಕೆ ಹಾಗೂ ಪ್ರಕರಣದ ಸರಿಯಾದ ನ್ಯಾಯ ನಿರ್ಣಯಕ್ಕೆ ಅವಶ್ಯಕ ದಸ್ತಾವೇಜುಗಳನ್ನು ಪರಿಗಣಿಸಬೇಕೆ ಎಂಬುದನ್ನು ಗಮನಿಸಬೇಕಾಗುತ್ತದೆ. ತನಿಖಾಧಿಕಾರಿಯು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173 (5) ಮತ್ತು 175(8) ಪ್ರಕರಣಗಳಡಿಯಲ್ಲಿ ಯಾವುದೇ ದಸ್ತಾವೇಜುಗಳು ಅಥವಾ ವರದಿಗಳನ್ನು ಸಂರಕ್ಷಿಸಿರುವುದಿಲ್ಲವೆಂಬುದನ್ನು ಪರಿಗಣಿಸಿ ಈ ವಾಸ್ತವಾಂಶಗಳನ್ನು ಗಮನಿಸಿಕೊಳ್ಳಬೇಕಾಗಿರುತ್ತದೆ. ಈ ಸಂದರ್ಭಗಳಲ್ಲಿ, ಪಕ್ಷಕಾರರ ಹಕ್ಕುಗಳ ಸರಿಯಾದ ನ್ಯಾಯನಿರ್ಣಯಕ್ಕೆ ಸಂಬಂಧಿಸಿದಂತೆ ಕೆಲವು

ದಸ್ತಾವೇಜುಗಳು ನಿರುಪಾಧಿಕವಾಗಿ ಅವಶ್ಯಕವಾಗಿರುತ್ತವೆಂದು ನ್ಯಾಯಾಲಯದ ಗಮನಕ್ಕೆ ತಂದಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಸೂಕ್ತವಾದ ಹಾಗೂ ಸರಿಯಾದ ನ್ಯಾಯ ನೀಡುವ ಉದ್ದೇಶಕ್ಕಾಗಿ ಯಾವುದೇ ದಸ್ತಾವೇಜು ಅಥವಾ ಯಾವುದೇ ಸಾಕ್ಷ್ಯವನ್ನು ಸಂರಕ್ಷಿಸಿಕೊಳ್ಳಲು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣವನ್ನು ಚಲಾಯಿಸುವುದರಿಂದ ನ್ಯಾಯಾಲಯವನ್ನು ದೂರವಿಡುವಂತಿರುವುದಿಲ್ಲ.

12. ಈ ಹಿನ್ನೆಲೆಯಲ್ಲಿ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ***ರಾಜಾರಾಮ್ ಪ್ರಸಾದ್ ಯಾದವ್ –ವಿರುದ್ಧ– ಬಿಹಾರ ರಾಜ್ಯ ಮತ್ತು ಮತ್ತೊಬ್ಬರು***[2] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಗುರುತರವಾದ ತೀರ್ಪಿನ ಕಡೆಗೆ ನನ್ನ ಗಮನವನ್ನು ಸೆಳೆದಿರುತ್ತಾರೆ. ವಾಸ್ತವವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕ್ರಿಮಿನಲ್ ಪ್ರಕ್ರಿಯ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ನ್ಯಾಯಾಲಯದ ಅಧಿಕಾರಗಳನ್ನು ವಿವರಿಸಿ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದ್ದು, ಅವು ಈ ಮುಂದಿನಂತಿರುತ್ತವೆ:

> *"23. ಸಾಕ್ಷ್ಯ ಅಧಿನಿಯಮದ 138ನೇ ಪ್ರಕರಣದೊಂದಿಗೆ ಓದಲಾದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ಅರ್ಜಿಯೊಂದಿಗೆ ವ್ಯವಹರಿಸುವಾಗ ಮೇಲಿನ ನಿರ್ಣಯಗಳ ಪರಿಗಣಿತ ದೃಷ್ಟಿಕೋನಗಳಿಂದ, ನಾವು ಈ ಮುಂದಿನ ತತ್ವಗಳನ್ನು ನ್ಯಾಯಾಲಯಗಳು ಗಮನದಲ್ಲಿಟ್ಟುಕೊಳ್ಳಬೇಕೆಂದು ಭಾವಿಸುತ್ತೇವೆ.*
>
> *(ಎ) ನ್ಯಾಯಾಲಯವು ಹೊಸ ಸಾಕ್ಷ್ಯದ ಅವಶ್ಯಕತೆಯಿದೆಯೆಂದು ಯೋಚಿಸಿರುವುದು ಸರಿಯಾದುದಗಿರುತ್ತದೆಯೇ? 311ನೇ ಪ್ರಕರಣದಡಿಯಲ್ಲಿ ಮುಂದುವರಿಯಬೇಕೆಂದು ಕೋರುವ ಸಾಕ್ಷ್ಯವು ಪ್ರಕರಣದ*

2. ಎಸ್‌ಎಲ್‌ಪಿ (ಸಿಆರ್‌ಐ) ಸಂ. 2400/2011

*ನ್ಯಾಯಯುತ ತೀರ್ಮಾನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಗಮನಿಸಿರುತ್ತದೆಯೇ?*

*(ಬಿ) ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ವ್ಯಾಪಕವಾದ ವಿವೇಚನಾಧಿಕಾರದ ಚಲಾವಣೆಯು, ತೀರ್ಪನ್ನು ನ್ಯಾಯಾದೇಶವನ್ನು ವಿಫಲಗೊಳಿಸುವ ಮೂಲಕ ವಾಸ್ತವಾಂಶಗಳ ಅಪೂರ್ಣ, ನಿರ್ಣಾಯಕವಲ್ಲದ, ಊಹಾಪೋಹ ಮಂಡನೆಯ ಮೇಲೆ ನೀಡಿರಬಾರದೆಂದು ಖಚಿತಪಡಿಸಬೇಕು.*

*(ಸಿ) ಯಾರೇ ಸಾಕ್ಷಿಯ ಸಾಕ್ಷ್ಯವು ಪ್ರಕರಣದ ನ್ಯಾಯಯುತ ತೀರ್ಮಾನಕ್ಕೆ ಅವಶ್ಯಕವಾಗಬೇಕೆಂದು ನ್ಯಾಯಾಲಯಕ್ಕೆ ಕಂಡು ಬಂದಲ್ಲಿ, ಯಾರೇ ಅಂಥ ವ್ಯಕ್ತಿಯನ್ನು ಸಮನು ಮಾಡಿ, ಪರೀಕ್ಷೆ ಮಾಡಲು ಅಥವಾ ಮತ್ತೊಮ್ಮೆ ಕರೆ ನೀಡಿ ಮರು ಪರೀಕ್ಷೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.*

*(ಡಿ) ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿನ ಅಧಿಕಾರ ಚಲಾವಣೆಯು, ಪ್ರಕರಣದ ನ್ಯಾಯಯುತವಾದ ಮತ್ತು ಸರಿಯಾದ ತೀರ್ಪನ್ನು ನೀಡುವಂಥ ವಾಸ್ತವಾಂಶಗಳಿಗೆ ಸಂಬಂಧಿಸಿದ ಸತ್ಯವನ್ನು ಶೋಧಿಸುವಂತ ಅಥವಾ ಸರಿಯಾದ ಆಧಾರವನ್ನು ಪಡೆಯುವಂಥ ಉದ್ದೇಶದೊಂದಿಗೆ ಮಾತ್ರ ಸಮಾವೇಶನಗೊಳ್ಳಬೇಕು.*

*(ಇ) ನ್ಯಾಯಾಲಯದ ಅಧಿಕಾರ ಚಲಾಯವಣೆಯಲ್ಲಿ, ನ್ಯಾಯದ ವಿಫಲತೆಯಿಂದಾಗಿ ಆಪಾದಿತರಿಗೆ ಗಂಭೀರ ಸ್ವರೂಪದಲ್ಲಿ ತೊಂದರೆಯುಂಟಾಗಿದೆಯೆಂದು, ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಂದ, ಎದ್ದುಕಾಣದ*

*ಹೊರತು ಪ್ರಾಸಿಕ್ಯೂಷನ್ ಪ್ರಕರಣದಲ್ಲಿ ಲೋಪವುಂಟಾಗುವಂತೆ ಸದರಿ ಅಧಿಕಾರದ ಚಲಾವಣೆಯನ್ನು ಸಂಯೋಜಿಸು ವಂತಿರುವುದಿಲ್ಲ.*

*(ಎಫ್) ವ್ಯಾಪಕ ವಿವೇಚನಾಧಿಕಾರವನ್ನು ನ್ಯಾಯಿಕವಾಗಿ ಚಲಾಯಿಸಬೇಕೆ ಹೊರತು, ನಿರಂಕುಶವಾಗಿಯಲ್ಲ.*

*(ಜಿ) ಪ್ರಕರಣದಲ್ಲಿ ಒಂದು ನ್ಯಾಯಯುತ ತೀರ್ಮಾನಕ್ಕೆ ಬರುವ ದೃಷ್ಟಿಯಿಂದ, ಪ್ರತೀ ಸಂದರ್ಭದಲ್ಲೂ ಅಂಥ ಸಾಕ್ಷ್ಯವನ್ನು ಪರೀಕ್ಷಿಸಲು ಅಥವಾ ಹೆಚ್ಚಿನ ಪರೀಕ್ಷೆಗೆ ಅವರನ್ನು ಮತ್ತೊಮ್ಮೆ ಕರೆಸಿಕೊಳ್ಳುವ ಅವಶ್ಯಕತೆ ಇದೆಯೆಂದು ನ್ಯಾಯಾಲಯಕ್ಕೆ ಸ್ವತಃ ಮನವರಿಕೆಯಾಗಬೇಕು.*

*(ಎಚ್) <u>ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದ ಉದ್ದೇಶವು, ಇದೇ ಸಂದರ್ಭದಲ್ಲಿ ಸತ್ಯವನ್ನು ನಿರ್ಧರಿಸಲು ಹಾಗೂ ನ್ಯಾಯಯುತ ತೀರ್ಪನ್ನು ನೀಡಲು ನ್ಯಾಯಾಲಯದ ಮೇಲೆ ಒಂದು ಕರ್ತವ್ಯವನ್ನು ವಿಧಿಸುತ್ತದೆ.</u>*

*(ಐ) ಹೆಚ್ಚುವರಿ ಸಾಕ್ಷ್ಯಗಳು ಇಲ್ಲದೆ ತೀರ್ಪನ್ನು ನೀಡುವುದು ಸಾಧ್ಯವೇ ಇಲ್ಲ ಎಂಬ ಕಾರಣಕ್ಕಾಗಿ ಅಲ್ಲದೆ, ಅಂಥ ಸಾಕ್ಷ್ಯವನ್ನು ಪರಿಗಣಿಸದಿದ್ದರೆ, ನ್ಯಾಯವು ವಿಫಲವಾಗುತ್ತದೆಂಬ ಕಾರಣಕ್ಕೆ ತೀರ ಅವಶ್ಯಕವಾಗಿರುತ್ತವೆ ಎಂಬ ತೀರ್ಮಾನಕ್ಕೆ ನ್ಯಾಯಾಲಯವು ಬರುತ್ತದೆ.*

*(ಜೆ) ಪರಿಸ್ಥಿತಿಯ ಜರೂರು, ನ್ಯಾಯ ವರ್ತನೆ ಮತ್ತು ಒಳ್ಳೆಯ ಮನಸ್ಥಿತಿಗಳು ವಿವೇಚನೆಯನ್ನು ಚಲಾಯಿಸುವಾಗ ಪ್ರಯೋಜನಕಾರಿಯಾಗಿರುತ್ತವೆ. ನ್ಯಾಯಾಲಯವು,*

ಅಧಿವಿಚಾರಣೆಯಲ್ಲಿ ಯಾರೇ ಪಕ್ಷಕಾರನನ್ನು, ತಪ್ಪುಗಳನ್ನು ತಿದ್ದಿಕೊಳ್ಳುವುದರಿಂದ ಪ್ರತಿಬಂಧಿಸುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು ಹಾಗೂ ಯಾವುದೇ ತೊಂದರೆಯಿಂದಾಗಿ, ದಾಖಲೆಯಾಗಬೇಕಾದ ಸರಿಯಾದ ಸಾಕ್ಷ್ಯವನ್ನು ಹಾಜರುಪಡಿಸದಿದ್ದಲ್ಲಿ ಅಥವ ಸೂಕ್ತ ಸಾಕ್ಷ್ಯಾಧಾರವನ್ನು ಮಂಡಿಸದಿದ್ದಲ್ಲಿ, ನ್ಯಾಯಾಲಯವು, ಅಂಥ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅನುಮತಿಸಬೇಕಾಗುತ್ತದೆ.

(ಕೆ) ನ್ಯಾಯಾಲಯವು, ಅಧಿವಿಚಾರಣೆಯು, ಮೂಲತಃ ಸೆರೆಮನೆವಾಸಿಗಳಿಗೆ ಸಂಬಂಧಿಸಿದಂತೆಯೇ ನಡೆಯುತ್ತದೆಂಬ ವಿಷಯವನ್ನು ಪ್ರಜ್ಞಾಪೂರ್ವಕವಾಗಿ ಮನಸ್ಸಿನಲ್ಲಿಟ್ಟು ಕೊಂಡಿರಬೇಕಾಗಿರುತ್ತದೆ. ನ್ಯಾಯಾಲಯವು ಸಾಧ್ಯವಾದಷ್ಟು ನ್ಯಾಯಯುತವಾದ ರೀತಿಯಲ್ಲೇ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿರುತ್ತದೆ. ಇಂಥ ಸಾದೃಶತೆಯ ಸಂದರ್ಭದಲ್ಲಿ, ಆಪಾದಿತನ ಖರ್ಚಿನಲ್ಲಿ ಶಕ್ಯ ಪ್ರತಿಕೂಲದ ವಿರುದ್ಧ ಪ್ರಾಸಿಕ್ಯೂಷನ್‌ನನ್ನು ಸಂರಕ್ಷಿಸುವುದಕ್ಕಿಂತ ಆಪಾದಿತನ ಹೆಸರಿನಲ್ಲಿ ಅವಕಾಶ ಪಡೆಯುವುದು ತಪ್ಪಿ ಹೋಗುವುದು ಸುರಕ್ಷಿತವಾಗಿರುತ್ತದೆ. ನ್ಯಾಯಾಲಯವು, ಇಂಥ ವಿವೇಚನಾಧಿಕಾರವನ್ನು ತಪ್ಪಾಗಿ ಅಥವಾ ಮನಸ್ಸಿಗೆ ಬಂದ ಹಾಗೆ ಚಲಾಯಿಸುವುದು ಅನಪೇಕ್ಷಣೀಯ ಫಲಿತಾಂಶಗಳಿಗೆ ಕಾರಣವಾಗುತ್ತದೆಂಬುದನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗಿರುತ್ತದೆ.

(ಎಲ್) ಹೆಚ್ಚುವರಿ ಸಾಕ್ಷ್ಯವನ್ನು, ಯಾರೇ ಒಬ್ಬ ಪಕ್ಷಕಾರನ ವಿರುದ್ಧ ಪ್ರಕರಣದ ಸ್ವರೂಪವನ್ನು ಬೇರೆ ಮಾಡಲು ಅಥವಾ ಬದಲಾಯಿಸಲು ಸ್ವೀಕರಿಸುವಂತಿಲ್ಲ.

*(ಎಂ) ಅಧಿಕಾರವನ್ನು ನೀಡಬೇಕೆಂಬ ಸಂಭಾವ್ಯವಿರುವಂಥ ಸಾಕ್ಷ್ಯವು ಒಳಗೊಂಡಿರುವ ವಿಷಯಕ್ಕೆ ಸಂಬಂಧಿಸಿದ್ದಾಗಿರಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಅಲ್ಲದೆ ಖಂಡನಾ ಅವಕಾಶವು ಮತ್ತೊಬ್ಬ ಪಕ್ಷಕಾರನಿಗೆ ನೀಡಲಾಗಿರುತ್ತದೆ ಎಂಬುದನ್ನು ಖಚಿತಪಡಿಸಿಕೊಂಡು ಚಲಾಯಿಸಬೇಕಾಗಿರುತ್ತದೆ.*

*(ಎನ್) ಆದ್ದರಿಂದ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ, ಸಮರ್ಥವಾದ ಹಾಗೂ ಸಿಂಧುವಾದ ಕಾರಣಗಳಿಗೆ ನ್ಯಾಯವನ್ನು ಪಡೆಯುವ ದಿಶೆಯಲ್ಲಿ ಮಾತ್ರ ನ್ಯಾಯಾಲಯದ ಅಧಿಕಾರವನ್ನು ಕೋರಬೇಕಾಗಿರುತ್ತದೆ ಹಾಗೂ ಅದನ್ನು ಎಚ್ಚರಿಕೆ, ಜಾಗರೂಕತೆ ಹಾಗೂ ಸೂಕ್ತ ವಿವೇಚನೆಗಳೊಂದಿಗೆ ಚಲಾಯಿಸಬೇಕಾಗಿರುತ್ತದೆ. ನ್ಯಾಯಾಲಯವು, ನ್ಯಾಯಯುತವಾದ ಅಧಿವಿಚಾರಣೆಯು ಆಪಾದಿತ, ಬಾಧಿತ ಮತ್ತು ಸಮಾಜದ ಹಿತಾಸಕ್ತಿಗಳನ್ನು ಮುಟ್ಟುತ್ತವೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕಾಗುತ್ತದೆ. ಆದ್ದರಿಂದ, ಸಂಬಂಧಪಟ್ಟ ವ್ಯಕ್ತಿಗಳಿಗೆ ನ್ಯಾಯಯುತವಾದ ಹಾಗೂ ಸರಿಯಾದ ಅವಕಾಶಗಳನ್ನು ನೀಡುವುದನ್ನು ಸಂವಿಧಾನಾತ್ಮಕ ಗುರಿ ಹಾಗೂ ಮಾನವೀಯ ಹಕ್ಕುಗಳಾಗಿರುವಂತೆ ಖಚಿತಪಡಿಸಬೇಕಾಗಿರುತ್ತದೆ.*

13. ಅರ್ಜಿದಾರರ ಪರ ಮಾನ್ಯ ವಕೀಲರು, ತನಿಖಾಧಿಕಾರಿಗಳು ಕೈ-ಬರಹ ತಜ್ಞರ ವರದಿ (ಸಿವಿಲ್ ನ್ಯಾಯಾಲಯದ ಎದುರು ಮಂಡಿಸಿದ) ಯನ್ನು ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸುವ ಹಿನ್ನೆಲೆಯಲ್ಲಿ ಸಂರಕ್ಷಿಸಿರುವುದಿಲ್ಲ ಹಾಗೂ ಇದನ್ನು ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ಮೂಲಕ ಸಂರಕ್ಷಿಸಿದ್ದು, ಇಂಥ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಆದೇಶಿಸಿದಲ್ಲಿ, ತನಿಖೆಯ ಲೋಪದೋಷಗಳನ್ನು ಮುಚ್ಚಿಕೊಳ್ಳುವ ದೃಷ್ಟಿಯಿಂದ ನ್ಯಾಯಾಲಯದ ಎದುರು ಈ ದಸ್ತಾವೇಜನ್ನು ಹಾಜರುಪಡಿಸಲು ಪ್ರಯತ್ನಿಸಿರುತ್ತಾರೆ ಹಾಗೂ ಸಾಕ್ಷ್ಯವನ್ನು

ಮುಂದುವರೆಯಲು ಒಪ್ಪಿಕೊಂಡರೆ ಇದು ಖಂಡಿತವಾಗಿಯು ಅಪಾದಿತರ ವಾದಕ್ಕೆ ಪ್ರತಿಕೂಲವಾದುದಾಗಿರುತ್ತದೆಂದು ವಾದಿಸಿರುತ್ತಾರೆ. ಆದ್ದರಿಂದ, ಆಪಾದಿತರ ಹಕ್ಕುಗಳು ಪ್ರತಿಕೂಲವಾಗಿದ್ದಾಗ, ಅಂಥ ದಸ್ತಾವೇಜುಗಳನ್ನು ಪ್ರಾಸಿಕ್ಯೂಷನ್ ಗುರುತು ಮಾಡಲು ಅಥವಾ ಉದಾಹರಿಸಲು ಒಪ್ಪಿಕೊಳ್ಳುವಂತಿಲ್ಲ.

14. ಮೇಲಿನ ನಿರ್ಣಯದಲ್ಲಿ, ವಾಸ್ತವವಾಗಿ, ಈ ಎಲ್ಲಾ ಆಯಾಮಗಳನ್ನು ನಿರ್ದಿಷ್ಟವಾಗಿ ಬಾಬು ಸಂ.(ಡಿ) ಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತುಂಬಾ ಮುಖ್ಯವಾಗಿ ಪರಿಗಣಿಸಿರುತ್ತದೆ. ಸರ್ವೋಚ್ಚ ನ್ಯಾಯಾಲಯವು, ಮೊಕದ್ದಮೆಗೆ ಸಂಬಂಧಿಸಿದಂತೆ ನ್ಯಾಯಯುತವಾದ ಹಾಗೂ ಸರಿಯಾದ ನಿರ್ಧಾರಕ್ಕೆ ಬರಲು ನೆರವಾಗುವಂಥ ವಾಸ್ತವಾಂಶಗಳಿಗೆ ಸಂಬಂಧಿಸಿದಂತೆ ಸತ್ಯವನ್ನು ಶೋಧಿಸುವ ಅಥವಾ ಸರಿಯಾದ ಆಧಾರವನ್ನು ಪಡೆಯುವ ಉದ್ದೇಶಕ್ಕೆ 311ನೇ ಪ್ರಕರಣವು ಕಾರಣವಾಗುತ್ತದೆಂದು ಹೇಳಿ ನ್ಯಾಯಾಲಯಗಳಿಗೆ ಮಾರ್ಗದರ್ಶನ ನೀಡಿರುತ್ತದೆ. ಮುಂದುವರೆದು, ಬಾಬು ಸಂ.(ಇ)ಯಲ್ಲಿ, ನ್ಯಾಯಾಲಯದ ಅಧಿಕಾರ ಚಲಾವಣೆಯಲ್ಲಿ, ನ್ಯಾಯದ ವಿಫಲತೆಯಿಂದಾಗಿ, ಆಪಾದಿತರಿಗೆ ಗಂಭೀರ ಸ್ವರೂಪದಲ್ಲಿ ತೊಂದರೆಯುಂಟಾಗಿದೆಯೆಂದು ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಂದ, ಎದ್ದು ಕಾಣದ ಹೊರತು ಪ್ರಾಸಿಕ್ಯೂಷನ್ ಪ್ರಕರಣದಲ್ಲಿ ಲೋಪವುಂಟಾಗುವಂತೆ ಸದರಿ ಅಧಿಕಾರದ ಚಲಾವಣೆಯನ್ನು ಸಂಯೋಜಿಸುವಂತಿರುವುದಿಲ್ಲವೆಂದೂ ಹೇಳಲಾಗಿದೆ. ಬಾಬು ಸಂಖ್ಯೆ (ಎಚ್)ನಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ, 311ನೇ ಪ್ರಕರಣದ ಉದ್ದೇಶವು, ಇದೇ ಸಂದರ್ಭದಲ್ಲಿ ಸತ್ಯವನ್ನು ನಿರ್ಧರಿಸಲು ಹಾಗೂ ನ್ಯಾಯಯುತ ತೀರ್ಪನ್ನು ನೀಡಲು ನ್ಯಾಯಾಲಯದ ಮೇಲೆ ಕರ್ತವ್ಯವನ್ನು ವಿಧಿಸುತ್ತದೆಂದೂ ಹೇಳಲಾಗಿರುತ್ತದೆ. ಹೆಚ್ಚುವರಿ ಸಾಕ್ಷ್ಯಗಳು ತೀರಾ ಅವಶ್ಯಕವಾಗಿರುತ್ತವೆಂದು ಇಲ್ಲದೆ ತೀರ್ಪನ್ನು ನೀಡುವುದು ಸಾಧ್ಯವೇ ಇಲ್ಲ ಎಂಬ ಕಾರಣಕ್ಕಾಗಿ ಅಲ್ಲದೆ, ಅಂಥ ಸಾಕ್ಷ್ಯವನ್ನು ಪರಿಗಣಿಸದಿದ್ದರೆ, ನ್ಯಾಯುವು ವಿಫಲವಾಗುತ್ತದೆಂಬ ಕಾರಣಕ್ಕೆ ತೀರ ಅವಶ್ಯಕವಾಗಿರುತ್ತವೆ ಎಂಬ ತೀರ್ಮಾನಕ್ಕೆ ನ್ಯಾಯಾಲಯುವು ಬಂದಲ್ಲಿ, ನ್ಯಾಯಾಲಯವು, ಅಧಿವಿಚಾರಣೆಯು, ಮೂಲತಃ ಸ್ವಾಭಾವಿಕ ನ್ಯಾಯದ ಮೂಲ ತತ್ವಗಳಿಗೆ ಸಂಬಂಧಿಸಿದಂತೆಯೇ ನಡೆಯುತ್ತದೆಂಬ ವಿಷಯವನ್ನು ಪ್ರಜ್ಞಾಪೂರ್ವಕವಾಗಿ

ಮನಸ್ಸಿನಲ್ಲಿಟ್ಟುಕೊಂಡಿರಬೇಕಾಗುತ್ತದೆ. ನ್ಯಾಯಾಲಯವು, ಸಾದ್ಯವಾದಷ್ಟು, ನ್ಯಾಯಯುತವಾದ ರೀತಿಯಲ್ಲೇ ಇಬ್ಬರೂ ಪಕ್ಷಕಾರರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಅವಕಾಶವನ್ನು ನಿರಾಕರಿಸಿದವರ ಖರ್ಚಿನಲ್ಲಿ ಶಕ್ಯ ಪ್ರತಿಕೂಲದ ವಿರುದ್ಧ ಮತ್ತೊಬ್ಬ ಪಕ್ಷಕಾರನನ್ನು ಸಂರಕ್ಷಿಸುವುದಕ್ಕಿಂತ ಪಕ್ಷಕಾರ ಹೆಸರಿನಲ್ಲಿ ಅವಕಾಶವನ್ನು ಪಡೆಯುವುದು ತಪ್ಪಿ ಹೋಗುವುದು ಸುರಕ್ಷಿತವಾದುದಾಗಿರುತ್ತದೆ. ನ್ಯಾಯಾಲಯವು ಇಂಥ ವಿವೇಚನಾಧಿಕಾರವನ್ನು ತಪ್ಪಾಗಿ ಅಥವಾ ಮನಸ್ಸಿಗೆ ಬಂದ ಹಾಗೆ ಚಲಾಯಿಸುವುದು ಅನಪೇಕ್ಷಣೀಯ ಫಲಿತಾಂಶಗಳಿಗೆ ಕಾರಣವಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

15. ***ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ -ವಿರುದ್ಧ- ಆರ್.ಎಸ್. ಪೈ ಮತ್ತು ಮತ್ತೊಬ್ಬರು***[3], ಪ್ರಕರಣದಲ್ಲಿನ ಮತ್ತೊಂದು ನಿರ್ಣಾಯಕ ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ತೀರ್ಪು ನೀಡಿರುತ್ತದೆ:

> *"ಮೇಲಿನ ಉಪ-ಪ್ರಕರಣಗಳಿಂದ, ಸಾಮಾನ್ಯವಾಗಿ, ತನಿಖಾಧಿಕಾರಿಯನ್ನು, ಆರೋಪಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ ಎಲ್ಲಾ ಸೂಕ್ತ ದಾಖಲೆಗಳನ್ನು ಹಾಜರುಪಡಿಸಲು ಅಗತ್ಯಪಡಿಸಲಾಗಿರುತ್ತದೆಂಬುದು ಎದ್ದುಕಾಣುತ್ತದೆ. ಅದೇ ಸಮಯದಲ್ಲಿ, ಯಾವುದೇ ನಿರ್ದಿಷ್ಟ ನಿಷೇಧ ಇಲ್ಲದಿರುವುದಕ್ಕಿಂತ ಹೆಚ್ಚುವರಿ ದಸ್ತಾವೇಜುಗಳನ್ನು ತರುವಾಯ ಹಾಜರು ಪಡಿಸುವಂತಿಲ್ಲವೆಂದು ಅಭಿಪ್ರಾಯಪಡಲಾಗುವುದಿಲ್ಲ. ವರದಿ ಅಥವಾ ಆರೋಪಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ ಸೂಕ್ತ ದಸ್ತಾವೇಜುಗಳನ್ನು ಸಲ್ಲಿಸದಿರುವಲ್ಲಿ ಕೆಲವು ತಪ್ಪುಗಳನ್ನು ಮಾಡಿದ್ದಲ್ಲಿ ಸದರಿ ದಸ್ತಾವೇಜುಗಳನ್ನು ನ್ಯಾಯಾಲಯದ ಅನುಮತಿಯೊಂದಿಗೆ ಹಾಜರುಪಡಿಸಲು ತನಿಖಾಧಿಕಾರಿಗೆ ಯಾವಾಗಲೂ ಮುಕ್ತ ಅವಕಾಶವಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ,*

3. ಎಐಆರ್ 2002 ಎಸ್‌ಸಿ 1644

*ಪ್ರಾಸಿಕ್ಯೂಷನ್‌ನ ಆರಂಭಿಕ ಹಂತವನ್ನು ಹಾಗೂ ಒಬ್ಬ ಪೊಲೀಸ್ ಅಧಿಕಾರಿಯ ಸಂದರ್ಭವನ್ನು ಪರಿಗಣಿಸಿ, (5)ನೇ ಉಪ–ಪ್ರಕರಣದಡಿಯಲ್ಲಿ ಬಳಸಿರುವ 'ತಕ್ಕದ್ದು' ಪದವು ಆಜ್ಞಾಪಕವೆಂಬಂತೆ ಪರಿಭಾಷಿಸದೆ, ಒಂದು ನಿರ್ದೇಶನದಂತೆ ಪರಿಭಾಷಿಸಬೇಕೆಂದು ಉದಾಹರಿಸಲು ಪ್ರಾಸಿಕ್ಯೂಷನ್ ಪ್ರಸ್ತಾವಿಸಿದಂಥ ಎಲ್ಲಾ ದಸ್ತಾವೇಜುಗಳು ಅಥವಾ ಅದರ ಸೂಕ್ತ ಉದ್ಧೃತಗಳನ್ನು ಕಳುಹಿಸಲು ಅಗತ್ಯಪಡಿಸಲಾಗಿರುತ್ತದೆ. ಸಾಮಾನ್ಯವಾಗಿ, ಪ್ರಾಸಿಕ್ಯೂಷನ್ ಉದಾಹರಿಸಲು ಬಯಸುವಂಥ ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ದಸ್ತಾವೇಜುಗಳನ್ನು ಮ್ಯಾಜಿಸ್ಟ್ರೇಟರಿಗೆ ಕಳುಹಿಸಬೇಕಾದ ಅವಶ್ಯಕತೆಯಿರುತ್ತದೆ. ಆದರೆ, ಅಲ್ಲಿ ಕೆಲವು ನಿರಸನಗಳಿದ್ದಲ್ಲಿ, ಉಳಿದ ದಸ್ತಾವೇಜುಗಳನ್ನು ತರುವಾಯ ಹಾಜರುಪಡಿಸಲಾಗಿಲ್ಲವೆಂಬ ಅರ್ಥವನ್ನು ಹೊಮದಿರುವುದಿಲ್ಲ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1898ರ 173(4)ರ ಪ್ರಕರಣದಡಿಯಲ್ಲಿನ ಸದೃಶ ಉಪಬಂಧವನ್ನು ನಾರಾಯಣ ರಾವ್ –ವಿರುದ್ಧ– ಆಂಧ್ರ ಪ್ರದೇಶ ರಾಜ್ಯ [(1958) ಎಸ್‌ಸಿಆರ್ 283 ––– 293] ಪ್ರಕರಣದಲ್ಲಿ ಈ ನ್ಯಾಯಾಲಯವು ಪರಿಗಣಿಸಿರುತ್ತದೆ ಹಾಗೂ 173ನೇ ಪ್ರಕರಣದ 4ನೇ ಉಪ–ಪ್ರಕರಣದಲ್ಲಿ ಮತ್ತು 207ಎ ನೇ ಪ್ರಕರಣದ 3ನೇ ಉಪ–ಪ್ರಕರಣದಲ್ಲಿರುವ 'ತಕ್ಕದ್ದು' ಪದವು ಆಜ್ಞಾಪಕವಾಗಿರದೆ, ನಿರ್ದೇಶನಾತ್ಮಕವಾಗಿರುತ್ತದೆ. ಮುಂದುವರೆದು, 173ನೇ ಪ್ರಕರಣದ (8)ನೇ ಉಪ–ಪ್ರಕರಣದ ಯೋಜನೆಯು, ಆರೋಪಪಟ್ಟಿಯನ್ನು ಸಲ್ಲಿಸಿದ ತರುವಾಯ ಕೂಡ, ಹೆಚ್ಚಿನ ತನಿಖೆಗೆ ಕರೆದಲ್ಲಿ, ಪ್ರತಿವಾದಿಸತಕ್ಕದ್ದಲ್ಲವೆಂಬುದನ್ನು ಸುಸ್ಪಷ್ಟಪಡಿಸಿರುತ್ತದೆ. ಹೆಚ್ಚಿನ ತನಿಖೆಯನ್ನು ಪ್ರತಿವಾದಿಸದಿದ್ದಲ್ಲಿ, ತರುವಾಯ, ತನಿಖೆಗೆ ಮೊದಲು ಅಥವಾ ತರುವಾಯ ಸಂಗ್ರಹಿಸಿದಂಥ ಹೆಚ್ಚುವರಿ ದಸ್ತಾವೇಜುಗಳನ್ನು ಸಲ್ಲಿಸಲು ಪ್ರಾಸಿಕ್ಯೂಷನ್ ಅನುಮತಿ ನೀಡಿರಲಿಲ್ಲ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಾಗಿ ಅಂಥ ಪ್ರಕರಣಗಳಲ್ಲಿ, ಆಪಾದಿತರ ಬಗ್ಗೆ ಯಾವುದೇ ಪೂರ್ವಾಗ್ರಹ ಇರುವುದಿಲ್ಲ. ಹಾಗಾಗಿ, ವಿಶೇಷ*

*ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ಊರ್ಜಿತವಾಗಿರುವುದಿಲ್ಲ.*

(ಇದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)

16. ನನ್ನ ಅಭಿಪ್ರಾಯದಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತೀರ್ಪನ್ನು ಇಲ್ಲಿ ಉಲ್ಲೇಖಿಸುವುದು ಸರಿಯೆನಿಸುವುದರಿಂದ ಅದನ್ನು ಇಲ್ಲಿ ಉಲ್ಲೇಖಿಸುತ್ತೇನೆ. ***ಓಂ ಪ್ರಕಾಶ್ ನಾರಂಗ್ –ವಿರುದ್ಧ– ರಾಜ್ಯ (ದೆಹಲಿ ಆಡಳಿತ)***[4] ದ ನಡುವಿನ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯ ಪಟ್ಟಿರುತ್ತದೆ:

*ಅಧಿವಿಚಾರಣೆಯ ಸಮಯದಲ್ಲಿ ದೋಷಪೂರ್ಣ ತನಿಖೆ ನಡೆದಿರುವುದು ತಿಳಿದುಬಂದಾಗ, ಇದನ್ನು ಅನುಮತಿಸಿದ ಹಾಗೆ ಸಾಂದರ್ಭಿಕವಾಗಿ ಹೆಚ್ಚಿನ ತನಿಖೆ ನಡೆಸಿ ಸರಿಪಡಿಸಬಹುದಾಗಿರುತ್ತದೆ. ಇದನ್ನು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಬೇಕು ಹಾಗೂ ಹೆಚ್ಚಿನ ತನಿಖೆ ನಡೆಸಲು ಔಪಚಾರಿಕ ಅನುಮತಿಯನ್ನು ಪಡೆಯಬೇಕು ಎಂಬುದು ಸಾಮಾನ್ಯವಾದ ಅಪೇಕ್ಷೆಯಾಗಿರುತ್ತದೆ. ವಿಷಯದ ಬಗ್ಗೆ ಮೌನವಾಗಿರುವುದಕ್ಕೆ ಬದಲು ಹೊಸ ವಾಸ್ತವಾಂಶಗಳು ಬೆಳಕಿಗೆ ಬಂದಾಗ, ಇದನ್ನು ಗಮನದಲ್ಲಿಟ್ಟುಕೊಂಡು, ಮುಂಚಿನ ಅಧಿವಿಚಾರಣೆಯು ಒಂದು ಪರಿಣಾಮಕಾರಿ ಅಧಿವಿಚಾರಣೆ ಆಗಬೇಕಿದ್ದು, ಆ ಹಿನ್ನೆಲೆಯಲ್ಲಿ ಮೊಕದ್ದಮ್ಮೆಯಲ್ಲಿ ಕಾಣೆಯಾಗಿದ್ದ ಹೊಸ ಸಂಗತಿಗಳು ಬೆಳಕಿಗೆ ಬಂದಾಗ ಯುಕ್ತ ತನಿಖೆಯ ಅವಧಿಯಲ್ಲಿ ರೂಪಿಸಲ್ಪಟ್ಟ ನೈಜ ಮತ್ತು ವಾಸ್ತವಿಕ ಅಪರಾಧಗಳಿಗಾಗಿ ಅವು ನ್ಯಾಯಾಲಯಗಳು ಮೊಕದಮ್ಮೆಯನ್ನು ಶೀಘ್ರವಾಗಿ ವಿಲೆ ಮಾಡುವಷ್ಟರ ಮಟ್ಟಿಗೆ ಅವು ಸೂಕ್ತವಾದುದಾಗಿರುತ್ತವೆ, ಅಪೇಕ್ಷಣೀಯವಾಗಿರುತ್ತವೆ ಮತ್ತು ಅಗತ್ಯವಾಗಿರುತ್ತವೆ.*

4. ಎಐಆರ್ 1979 ಎಸ್‌ಸಿ 1791

17. ಮೇಲಿನ ಸದರಿ ತೀರ್ಪುಗಳನ್ನು ಅರ್ಥವತ್ತಾಗಿ ಅರ್ಥೈಸಿಕೊಂಡ ಮೇಲೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದ (8)ನೇ ಉಪ–ಪ್ರಕರಣವು, ಆರೋಪ ಪಟ್ಟಿಯನ್ನು ಸಲ್ಲಿಸಿದ ತರುವಾಯ ಕೂಡ ಸಲ್ಲಿಸಿದ, ಅಧಿವಿಚಾರಣೆಯ ಅವಧಿಯಲ್ಲಿ ಹೆಚ್ಚಿನ ದಸ್ತಾವೇಜುಗಳನ್ನು, ದಸ್ತಾವೇಜುಗಳೆಂದು ಹಾಜರುಪಡಿಸಲು ಪ್ರಾಸಿಕ್ಯೂಷನ್‌ನನ್ನು ಅಧಿಕೃತಗೊಳಿಸಬಹುದೆಂಬುದು ಸ್ಪಷ್ಟವಾಗಿರುತ್ತದೆ. ಅಂಥ ಪ್ರಕರಣಗಳಲ್ಲಿ, ಅಂಥ ದಸ್ತಾವೇಜುಗಳನ್ನು ಹಾಜರುಪಡಿಸುವಲ್ಲಿ ಅಥವಾ ಅಂಥ ದಸ್ತಾವೇಜುಗಳನ್ನು ಗುರುತು ಮಾಡುವಲ್ಲಿ ಆಪಾದಿತರಿಗೆ ಯಾವುದೇ ಪೂರ್ವಾಗ್ರಹ ಕಾರಣವಾಗುವುದಿಲ್ಲವೆಂಬುದರ ಬಗ್ಗೆ ನ್ಯಾಯಾಲಯವು ಎಚ್ಚರಿಕೆ ವಹಿಸಬೇಕಾಗುತ್ತದೆ. ಯಾವುದೇ ಪ್ರಕ್ರಿಯಾ ಅಕ್ರಮವು ಉಂಟಾದಲ್ಲಿ, ಇದು ಪ್ರತಿಕೂಲವಾಗಿ ತೊಂದರೆ ಉಂಟು ಮಾಡಿಲ್ಲ ಅಥವಾ ಪ್ರತಿಕೂಲವಾಗಿ ಪೂರ್ವಾಗ್ರಹ ಪೀಡಿತವಾಗಿದ್ದಲ್ಲಿ ತೀರ್ಪು ನೀಡುವ ದೃಷ್ಟಿಯಲ್ಲಿ ಅದನ್ನು ನ್ಯಾಯಾಲಯವು ಅಲಕ್ಷಿಸಬಹುದಾಗಿರುತ್ತದೆ.

18. ಈಗ, ಆಪಾದಿತನಿಗೆ ಯಾವ ಪ್ರತಿಕೂಲವುಂಟಾಗಿದೆಯೆಂಬ ಅಂಶಕ್ಕೆ ಬರೋಣ. ಮಾನ್ಯ ವಕೀಲರು, ಪ್ರಕರಣದಲ್ಲಿ ಆಪಾದಿತನಿಗೆ ಉಂಟಾಗಿರುವ ಪ್ರತಿಕೂಲಕ ಸ್ವರೂಪವನ್ನು ನನ್ನ ಗಮನಕ್ಕೆ ತಂದಿರುವುದಿಲ್ಲ. ಈಗ ಈ ಅರ್ಜಿಯಲ್ಲಿ, ಕೈಬರಹ ತಜ್ಞರ ವರದಿಯ ಹಾಜರುಪಡಿಸುವಿಕೆಯನ್ನು ಮತ್ತು ಆಪಾದಿತನಿಗೆ ಪ್ರತಿಕೂಲವಾದ ತಜ್ಞರ ಪರೀಕ್ಷೆಗಳನ್ನು ವಿವರಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ನ್ಯಾಯಾಲಯವು 'ಪ್ರತಿಕೂಲ' ದ ಅರ್ಥವನ್ನು ಮೊದಲು ಅರ್ಥೈಸಿಕೊಂಡು ಪ್ರತಿಕೂಲದ ತತ್ವಗಳನ್ನು ಹೇಗೆ ಅನ್ವಯಿಸಿಕೊಳ್ಳಬೇಕೆಂದು ಅರ್ಥ ಮಾಡಿಕೊಳ್ಳಬೇಕಾಗಿರುತ್ತದೆ. ಪ್ರಾಸಿಕ್ಯೂಷನ್‌ನ ಪ್ರಕರಣದಲ್ಲಿನ ಯಾವುದೇ ದೋಷ ಆಪಾದಿತನ ಪ್ರತಿಕೂಲಕ್ಕೆ ಕಾರಣವಾಗಿದೆಯೇ ಅಥವಾ ಆರೋಪ ಪೂರ್ವ ಪಟ್ಟಿಯ ಸಾಕ್ಷ್ಯ ಅಥವಾ ದಸ್ತಾವೇಜುಗಳು ನ್ಯಾಯ ವೈಫಲ್ಯಕ್ಕೆ ಕಾರಣವಾಗಿವೆಯೇ ಎಂಬುದು ಸಧ್ಯದ ಪ್ರಶ್ನೆಯಾಗಿರುತ್ತದೆ.

ಪ್ರತಿಕೂಲವನ್ನು ಪದಕೋಶದಲ್ಲಿ ಈ ಮುಂದಿನಂತೆ ಪರಿಭಾಷಿಸಲಾಗಿರುತ್ತದೆ:–

*ನಡಾವಳಿಗಳಲ್ಲಿ ಇಬ್ಬರೂ ಪಕ್ಷಕಾರರ ಯಾವುದೇ ಮೌಲ್ಯಯುತ ಹಕ್ಕಿಗೆ ಕಾರಣವಾಗಿ ಅಥವಾ ಅದನ್ನು ಮೀರಿದ ಕೆಲವು ಕ್ರಮ ಅಥವಾ ನಿರ್ಣಯದಿಂದ ಉಂಟಾಗುವ ಅಥವಾ ಉಂಟಾಗಬಹುದಾದ ಹಾನಿ ಅಥವಾ ಕ್ಷತಿ.*

19. ಸದರಿ ನಿರ್ದಿಷ್ಟ ಪ್ರಕರಣದಲ್ಲಿ, ಅಂಥ ಅರ್ಜಿಯನ್ನು ಅಂಗೀಕರಿಸುವ ಮೂಲಕ, ಅಧಿವಿಚಾರಣಾ ನ್ಯಾಯಾಲಯವು ಕಾನೂನುಬಾಹಿರ ಕ್ರಮವನ್ನು ಅಥವಾ ಸರಿಪಡಿಸಲಾಗದ ಅಕ್ರಮವನ್ನು ಎಸಗಿದೆಯೆಂದು ಅಥವಾ ಕೈಬರಹ ತಜ್ಞರ ವರದಿಯನ್ನು ಸಲ್ಲಿಸುವಲ್ಲಿ ಅನ್ಯಾಯವಾಗಿದೆಯೆಂದು ಅಥವಾ ಇದು ಕೇವಲ ಕಾರ್ಯವಿಧಾನದ ಅಕ್ರಮವೆಂದು ಅರ್ಥೈಸಿಕೊಳ್ಳುತ್ತಿರುವುದು ಮುಖ್ಯವಾದ ಸಮಸ್ಯೆಯಾಗುತ್ತಿದೆ. ತೀರ್ಪನ್ನು ನ್ಯಾಯೋಚಿತವಾಗಿ ನೀಡಬೇಕಾಗಿರುತ್ತದೆ ಹಾಗೂ ಇದು ಕ್ರಿಮಿನಲ್ ನ್ಯಾಯ ಶಾಸ್ತ್ರದ ಮೂಲ ತತ್ವವಾಗಿರುತ್ತದೆ. ಪ್ರಾಸಿಕ್ಯೂಷನ್‌ನ ಯಾವುದೇ ಕೃತ್ಯವು ಗಂಭೀರ ಅಕ್ರಮಕ್ಕೆ ಕಾರಣವಾಗುತ್ತದೆ. ಅಥವಾ ಸರಿಪಡಿಸಲಾಗದ ಅಕ್ರಮವು ಪ್ರತಿಕೂಲಕ್ಕೆ ಕಾರಣವಾಗಿರುತ್ತದೆ. ಅಂಥ ಪ್ರತಿಕೂಲವನ್ನು ಪರಿಗಣಿಸಿದಲ್ಲಿ, ಅದು ಆಪಾದಿತರ ಪ್ರಕರಣಕ್ಕೆ ಅಥವಾ ಪ್ರಾಸಿಕ್ಯೂಷನ್‌ನ ಪ್ರಕರಣಕ್ಕೆ ಕಾರಣವಾಗುತ್ತದೆ. ಆದ್ದರಿಂದ ಯಾವುದೇ ಪ್ರಮುಖ ಅನ್ಯಾಯವು ಇಲ್ಲದಿರುವಲ್ಲಿ ಹಾಗೂ ಯಾರೇ ಪಕ್ಷಕಾರರ ಹಕ್ಕನ್ನು ಭಂಗಪಡಿಸಲಾಗಿದೆಯೆಂಬ ಯಾವುದೇ ವಿಷಯವು ಸಂಪೂರ್ಣವಾಗಿ ಇಲ್ಲದಿರುವಲ್ಲಿ, ಕ್ರಿಮಿನಲ್ ಪ್ರಕರಣಗಳಲ್ಲಿ ಸ್ವಾಭಾವಿಕ ನ್ಯಾಯದ ತತ್ವಗಳು ಉಳಿದುಕೊಂಡಾಗ, ಇದನ್ನು ಯಾವುದೇ ಪ್ರತಿಕೂಲವುಂಟಾಗಿದೆ ಎಂದು ಹೇಳಲಾಗುವುದಿಲ್ಲ. ನ್ಯಾಯಾಲಯವು ಸ್ವಾಭಾವಿಕ ನ್ಯಾಯದ ತತ್ವಗಳಿಗೆ ಹೊಂದಿಕೊಂಡಿದ್ದಲ್ಲಿ ಹಾಗೂ ಅದನ್ನು ಸಂಪೂರ್ಣವಾಗಿ ಅನುಸರಿಸುತ್ತಿದ್ದಲ್ಲಿ, ತರುವಾಯ ಇದು ಆಪಾದಿತನ ಯಾವುದೇ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುವುದಿಲ್ಲ ಅಥವಾ ಆಪಾದಿತ ವ್ಯಕ್ತಿಯ ಹಕ್ಕುಗಳ ಯಾವುದೇ ಪ್ರತಿಕೂಲಕ್ಕೆ ಕಾರಣವಾಗುವುದಿಲ್ಲ. ಸ್ವಾಭಾವಿಕ ನ್ಯಾಯದ ತತ್ವಗಳಿಗೆ ಹೊಂದಿಕೊಂಡಿದ್ದಲ್ಲಿ ಕೂಡ ನ್ಯಾಯಾಲಯವು ಕಾನೂನುಬಾಹಿರತೆ ಅಥವಾ ಅಕ್ರಮತೆಗಳನ್ನು ಸರಿಪಡಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ, ಪ್ರಾಸಿಕ್ಯೂಷನ್‌ನ ಅಂಥ ಕೃತ್ಯವು

ಆಪಾದಿತನ ಹಕ್ಕುಗಳ ಪ್ರತಿಕೂಲಕ್ಕೆ ಕಾರಣವಾಗುತ್ತದೆ. ಇದೇ ರೀತಿ, ನ್ಯಾಯಾಲಯವು ಅರ್ಜಿದಾರನಿಗೆ ಯಾವುದೇ ಪ್ರತಿಕೂಲವನ್ನು ಉಂಟು ಮಾಡಿದೆಯೇ ಎಂಬುದನ್ನು ನೋಡಬೇಕಾಗಿರುತ್ತದೆ.

20. ನನ್ನ ಅಭಿಪ್ರಾಯದಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಮತ್ತು (8)ನೇ ಪ್ರಕರಣಗಳಡಿಯಲ್ಲಿ ದಸ್ತಾವೇಜುಗಳನ್ನು ಹಾಜರುಪಡಿಸುವಾಗ, ಕೆಲವು ಕಾರ್ಯ ವಿಧಾನದ ಅಕ್ರಮಗಳಿದ್ದಾಗ್ಯೂ ಆಪಾದಿತರಿಗೆ ಯಾವುದೇ ಪ್ರತಿಕೂಲ ಉಂಟಾಗಿರುವುದಿಲ್ಲ. ದಸ್ತಾವೇಜುಗಳನ್ನು ಹಾಜರುಪಡಿಸಬೇಕೆಂದು ಕೋರಿದ್ದಾಗ್ಯೂ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(5) ಮತ್ತು (1)ನೇ ಪ್ರಕರಣದಡಿಯಲ್ಲಿ ನೇರವಾದ ರೀತಿಯಲ್ಲಿ ಹಾಜರುಪಡಿಸದೆ ಆಧಾರ ಒದಗಿಸಬೇಕೆಂದು ಸಾಕ್ಷ್ಯವನ್ನು ಕೋರಲಾಗಿರುತ್ತದೆ. ಹಾಗಿದ್ದರೂ, ಆ ದಸ್ತಾವೇಜುಗಳು, ಪಕ್ಷಕಾರರ ಹಕ್ಕುಗಳ ಸರಿಯಾದ ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದಂತೆ ಅವಶ್ಯಕವಾಗಿರುತ್ತದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ ತನಿಖಾಧಿಕಾರಿಯಿಂದ ಅನುಸರಿಸಬೇಕಾದ ಅಕ್ರಮ ಪ್ರಕ್ರಿಯೆಯನ್ನು ಮೀರಿದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ, ನಂತರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 311ನೇ ಪ್ರಕರಣದಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿದಾಗ, ಅಕ್ರಮ ಕಾರ್ಯವಿಧಾನದ ಮೂಲಕ ದಾಖಲೆಯ ಮೇಲೆ ತರಲಾದಂಥ ಹೆಚ್ಚುವರಿ ಸಾಕ್ಷ್ಯಗಳನ್ನು ತಂದಾಗ್ಯೂ ನಿರ್ದಿಷ್ಟ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಮೇಲೆ ಅವಲಂಬಿಸಿರುವ ಸಮುಚಿತ ಆದೇಶವನ್ನು ಹೊರಡಿಸಲು ನ್ಯಾಯಾಲಯವನ್ನು ಶಕ್ತಗೊಳಿಸುತ್ತದೆ.

21. ಆಪಾದಿತ ವ್ಯಕ್ತಿ, ನಿಶಾನೆ ಪಿ.25, ಪಿ.47 ಮತ್ತು ಪಿ.54 ಎಂದು ಗುರುತು ಮಾಡಿದಂಥ ಈ ದಸ್ತಾವೇಜುಗಳನ್ನು ಅಧಿವಿಚಾರಣಾ ಸಮಯದಲ್ಲಿ ತನಿಖಾಧಿಕಾರಿಯು ಹಾಜರುಪಡಿಸಲೇ ಇಲ್ಲ ಎಂದು ಹೇಳಿರುವುದಿಲ್ಲ. ಈ ಮೂರು ಪ್ರಮುಖ ದಸ್ತಾವೇಜುಗಳು ನಡಾವಳಿಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಖಂಡಿತ, ತನಿಖೆಯ ಸಮಯದಲ್ಲಿ ಈ ದಸ್ತಾವೇಜುಗಳನ್ನು ಕಳುಹಿಸದೆ

ತನಿಖಾಧಿಕಾರಿಯು ಗಂಭೀರವಾದ ತಪ್ಪನ್ನು ಎಸಗಿರುತ್ತಾರೆ. ಆದರೆ ಕ್ರಿಮಿನಲ್ ಪ್ರಕರಣವನ್ನು ಎದುರಿಸುತ್ತಿರುವಂಥ ಪಕ್ಷಕಾರರೂ ಕೂಡ ಸಿವಿಲ್ ಪ್ರಕರಣದಲ್ಲಿನ ಎದುರು ಪಕ್ಷಕಾರರಾಗಿರುತ್ತಾರೆ ಅಂದರೆ, ಈ ಪ್ರಕರಣದಲ್ಲಿನ ಫಿರ್ಯಾದುದಾರರು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಕೋರಿ ಹಾಗೂ ಪಡೆದ ದಸ್ತಾವೇಜುಗಳನ್ನು ಕೈಬರಹ ತಜ್ಞರಿಗೆ ನೀಡಿ, ವರದಿ ಪಡೆದುಕೊಳ್ಳುವ ಹಕ್ಕನ್ನು ಚಲಾಯಿಸುವಂಥವರಾಗಿರುತ್ತಾರೆ. ಆದ್ದರಿಂದ, ಪ್ರಾಸಿಕ್ಯೂಷನ್‌ಗೆ ಯಾವುದೇ ಅವಕಾಶವನ್ನು ನೀಡದಿದ್ದಲ್ಲಿ, ಕ್ರಿಮಿನಲ್ ನ್ಯಾಯಾಲಯದ ಎದುರು ಫಿರ್ಯಾದುದಾರನು ತನ್ನ ವಾದವನ್ನು ಸುಸ್ಥಾಪಿಸುವಲ್ಲಿನ ಆತನ ಮೌಲ್ಯಯುತವಾದ ಹಕ್ಕುಗಳಿಗೆ ಕಷ್ಟಕರ ಸನ್ನಿವೇಶ ಒದಗಿಬರುತ್ತದೆ. ಹಾಗಾದಲ್ಲಿ, ದೂರು ಸಂಬಂಧಪಡುವಷ್ಟರ ಮಟ್ಟಿಗೆ, ಇದು ಸ್ವಾಭಾವಿಕ ನ್ಯಾಯದ ಉಲ್ಲಂಘನೆಗೆ ಖಂಡಿತ ಕಾರಣವಾಗುತ್ತದೆ.

22. ನ್ಯಾಯ ನಿರ್ವಹಣೆಯು, ವ್ಯವಹರಣೆಗಳಿಗೆ ಉಭಯ ಪಕ್ಷಕಾರರಿಗೆ ಸಂಪೂರ್ಣ ಅವಕಾಶವನ್ನು ಒದಗಿಸುವ ದೃಷ್ಟಿಯಿಂದ ಸ್ವಾಭಾವಿಕ ನ್ಯಾಯದ ತತ್ವಗಳಿಗೆ ಕಟ್ಟುನಿಟ್ಟಾಗಿ ಅನುಸಕ್ತವಾಗುವುದನ್ನು ಅಗತ್ಯಪಡಿಸುತ್ತದೆ. ಆದ್ದರಿಂದ, ವಾಸ್ತವವಾಗಿ ನ್ಯಾಯಯುತವಾದ ಅಧಿವಿಚಾರಣೆಯು, ವ್ಯವಹರಣೀಯ ಕಾನೂನುಗಳ ಮುಖ್ಯ ಉದ್ದೇಶವಾಗಿರುತ್ತದೆ ಮತ್ತು ಇಂಥ ನ್ಯಾಯೋಚಿತತೆಯು ಯಾವುದೇ ರೀತಿಯಲ್ಲೂ ಘಾಸಿಗೊಳಿಸುವುದಿಲ್ಲ ಅಥವಾ ಭಯಪಡಿಸುವುದಿಲ್ಲವೆಂಬುದನ್ನು ಖಚಿತಪಡಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ನ್ಯಾಯೋಚಿತವಾದ ಅಧಿವಿಚಾರಣೆಯು ಆಪಾದಿತರ, ಘಟನೆಗೆ ಬಲಿಯಾದವರ ಹಿತಾಸಕ್ತಿಯನ್ನು ಮಾತ್ರವಲ್ಲದೆ ಒಟ್ಟಾರೆ ಸಮಾಜದ ಹಿತಾಸಕ್ತಿಗೆ ಹಕ್ಕುಳ್ಳದ್ದಾಗಿರುತ್ತದೆ. ಆದ್ದರಿಂದ ನ್ಯಾಯೋಚಿತ ಅಧಿವಿಚಾರಣೆಯು ಸಾಮಾಜಿಕ ಪ್ರಭಾವದ ಉಲ್ಲೇಖದೊಂದಿಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ನ್ಯಾಯೋಚಿತವಾದ ಮತ್ತು ಸರಿಯಾದ ಅವಕಾಶಗಳನ್ನು ನೀಡುವುದನ್ನು ಒಳಗೊಳ್ಳುತ್ತದೆ ಹಾಗೂ ಇದು ಸಂವಿಧಾನಿಕ ಅಂತೆಯೇ ಮಾನವೀಯ ಹಕ್ಕನ್ನು ಖಚಿತಪಡಿಸುತ್ತದೆ. ಹಾಗಾಗಿ, ನ್ಯಾಯಾಲಯವು ಅಂಥ ಯಾವುದೇ ಸಂದರ್ಭದಲ್ಲೂ, ಪಕ್ಷಕಾರರ ನ್ಯಾಯೋಚಿತವಾದ ಅಧಿವಿಚಾರಣೆಯ ಹಕ್ಕು ಅಪಾಯದಲ್ಲಿದೆ ಎಂದು ಭಾವಿಸುವಂತಿಲ್ಲ. ಪಕ್ಷಕಾರರಿಂದಾಗಲೀ ಅವರ ವಾದವನ್ನು ಬೆಂಬಲಿಸುವಲ್ಲಿ ಸಾಕ್ಷ್ಯವನ್ನು ಮಂಡಿಸುವುದು ಮೌಲ್ಯಯುತವಾದ ಹಕ್ಕಾಗಿರುತ್ತದೆ.

ಅಂಥ ಹಕ್ಕಿನ ನಿರಾಕರಣೆಯು ನ್ಯಾಯೋಚಿತವಾದ ಅಧಿವಿಚಾರಣೆಯ ನಿರಾಕರಣೆಗೆ ಕಾರಣವಾಗುತ್ತದೆ. ಹಾಗಾಗಿ, ನಡಾವಳಿಯ ನಿಯಮಗಳನ್ನು ನ್ಯಾಯವನ್ನು ಖಚಿತಪಡಿಸುವುದಕ್ಕೆ ರೂಪಿಸಿರುವುದು ಮನಸಾಕ್ಷಿಗನುಸಾರವಾಗಿರಬೇಕೆಂಬುದು ಅವಶ್ಯಕವಾಗಿದ್ದು, ನ್ಯಾಯಾಲಯಗಳು ಅದನ್ನು ಪೋಷಿಸಲು ಮುಂದಾಗಬೇಕೆ ಹೊರತು ಅದನ್ನು ತಿರುಚಬಾರದು. ಮೇಲೆ ಹೇಳಿದ ಸಂದರ್ಭಗಳ ಹಿನ್ನೆಲೆಯಲ್ಲಿ ನಾನು ಪ್ರಾಸಿಕ್ಯೂಷನ್‌ಗೆ ಅವಕಾಶವನ್ನು ಒದಗಿಸುವ ದೃಷ್ಟಿಯಿಂದ, ಅರ್ಜಿಯನ್ನು ಅಂಗೀಕರಿಸಲಾಗುವುದು ಎಂದು ಅಭಿಪ್ರಾಯಪಡುತ್ತೇನೆ ಹಾಗೂ ಈ ಸಂಬಂಧದಲ್ಲಿ ಸದರಿ ಆದೇಶದಲ್ಲಿ ನನಗೆ ಯಾವುದೇ ದೋಷ ಕಂಡು ಬಂದಿರುವುದಿಲ್ಲ.

23. ಅಲ್ಲದೆ, ಅರ್ಜಿದಾರರ ಪರ ಮಾನ್ಯ ವಕೀಲರು, ಸಾಕ್ಷ್ಯ ನೀಡುವ ಸಮಯದಲ್ಲಿ, ತನಿಖಾಧಿಕಾರಿಗಳ ಬಾಯಿಯಿಂದ ಕೆಲವು ಸಮ್ಮತಿಗಳನ್ನು ಹೊರಗೆಳೆದಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಈ ನಿರ್ದಿಷ್ಟ ದಸ್ತಾವೇಜನ್ನು ಹಾಜರುಪಡಿಸಲು ಒಪ್ಪಿದಲ್ಲಿ ಮತ್ತು ಸಾಕ್ಷ್ಯದಲ್ಲಿ ಗುರುತು ಮಾಡಿದಲ್ಲಿ, ಅಂಥ ಸಮ್ಮತಿಯಿಂದ ಇದು ದೂರ ಉಳಿದುಬಿಡುತ್ತದೆ. ನನ್ನ ಅಭಿಪ್ರಾಯದಲ್ಲಿ, ಒಂದು ವಾಸ್ತವಾಂಶವನ್ನು ಒಪ್ಪಿಕೊಂಡ ನಂತರ ನಾವು ಅದಕ್ಕೆ ಬದ್ಧವಾಗಿರಬೇಕೆ ಹೊರತು ಅದರಿಂದ ದೂರ ಉಳಿಯಬಾರದಾಗಿರುತ್ತದೆ. ಒಪ್ಪಿಕೊಂಡಂತೆ, ನ್ಯಾಯಾಲಯದ ಮುಂದೆ, ಆರೋಪ ಪಟ್ಟಿಯನ್ನು ಈಗ ಸಲ್ಲಿಸುವುದಕ್ಕೆ ಮತ್ತು ಮುಂದೆ ಸಲ್ಲಿಸುತ್ತಿರುವುದಕ್ಕೆ ಕೈ–ಬರಹ ತಜ್ಞರ ವರದಿಯು ಭದ್ರಪಡಿಸಲಾಗಿರುತ್ತದೆ/ ಮಹತ್ವವುಳ್ಳದಾಗಿರುತ್ತದೆ. ತನಿಖಾಧಿಕಾರಿಯು, ಅಭಿಪ್ರಾಯ ಕೋರಿ ಕೈಬರಹ ತಜ್ಞರಿಗೆ ವಿವಾದಿತ ದಸ್ತಾವೇಜನ್ನು ಕಳುಹಿಸಲು ಯಾವುದೇ ಪತ್ರವನ್ನು ಕಳುಹಿಸಿರಲಿಲ್ಲವೆಂದು ಹಾಗೂ ತನಿಖೆಯ ಈ ದೋಷವು ಹಾಗೆಯೇ ಉಳಿದುಕೊಂಡುಬಿಟ್ಟಿತೆಂದು ಹಾಗೂ ದಾಖಲೆಯ ಮೇಲೆ ಸಾಕ್ಷ್ಯವನ್ನು ಮಂಡಿಸುವಾಗ ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಬೇಕಿತ್ತೆಂದೂ ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ತನಿಖಾ ಏಜೆನ್ಸಿಗಳು ದೋಷ ಅಥವಾ ನಿರಸನಗಳನ್ನು ಮಾಡಿದಲ್ಲಿ ಅಥವಾ ನಿರ್ಲಕ್ಷ್ಯವನ್ನು ತೋರಿದ್ದಲ್ಲಿ, ಪ್ರಾಸಿಕ್ಯೂಷನ್ ಸಾಕ್ಷ್ಯವು ಸದರಿ ಸಾಕ್ಷ್ಯವನ್ನು ನಂಬುವಂತಹುದೆ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಅಂಥ ನಿರಸನಗಳು ಅಪ್ರಸ್ತುತವೆಂಬುದನ್ನು ಪರೀಕ್ಷಿಸುವ ಅಗತ್ಯವಿರುತ್ತದೆ ಎಂಬುದನ್ನು ನಾವು

ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವುದು ತುಂಬಾ ಪ್ರಮುಖವಾದ ವಿಷಯವಾಗಿರುತ್ತದೆ. ಈ ವಿಚಾರದಲ್ಲಿ ನ್ಯಾಯಾಲಯವು ಸಕ್ರಿಯವಾದ ಹಾಗೂ ವಿಶ್ಲೇಷನಾತ್ಮಕವಾದ ಪಾತ್ರವನ್ನು ನಿರ್ವಹಿಸಬೇಕಾಗಿರುತ್ತದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173, 311, 391 ಮತ್ತು ಸಾಕ್ಷ್ಯ ಅಧಿನಿಯಮ 1872ರ 165ನೇ ಪ್ರಕರಣಗಳನ್ನು ಆಧರಿಸಿ ನಡೆಸುವ ಸತ್ಯಶೋಧನೆಯಲ್ಲಿ ಯಾರೇ ನೌಕರರ ನಡತೆಯಲ್ಲಿ ತಪ್ಪನ್ನು ಎಸಗಿದಲ್ಲಿ ಅದು ಊರ್ಜಿತವಾಗುವುದಿಲ್ಲ.

24. ಅರ್ಜಿದಾರರ ಪರ ಮಾನ್ಯ ವಕೀಲರು, ಕೈಬರಹ ತಜ್ಞರ ವರದಿಗೆ ಸಂಬಂಧಪಡುವಷ್ಟರ ಮಟ್ಟಿಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿ, ಪ್ರಾಸಿಕ್ಯೂಷನ್ ಹಾಜರುಪಡಿಸಬೇಕಾದ ಸದರಿ ದಸ್ತಾವೇಜನ್ನು ಅಂಗೀಕರಿಸಿ, ಸಾಕ್ಷ್ಯವನ್ನು ಅಂಗೀಕರಿಸಿದಲ್ಲಿ, ಇದು ಆಪಾದಿತನನ್ನು ಪೂರ್ವಾಗ್ರಹದಿಂದ ಕಂಡಂತಾಗುತ್ತದೆ. ವಕೀಲರ ವಿವೇಚನೆಯೂ ಸಹ ಕಾನೂನಾತ್ಮಕವಾಗಿ ಊರ್ಜಿತವಾಗಿರುವುದಿಲ್ಲ; ತಜ್ಞರ ಸಾಕ್ಷ್ಯವನ್ನು ಉದಾಹರಿಸುವುದರೊಂದಿಗೆ ತಜ್ಞರ ಸಾಕ್ಷ್ಯವು ಕೇವಲ ಅಭಿಪ್ರಾಯ ವ್ಯಕ್ತಪಡಿಸುವ ಸಾಕ್ಷ್ಯವಾಗಿದ್ದು ನ್ಯಾಯಾಲಯವು ಎಲ್ಲಾ ಸೂಕ್ತ ಸಾಕ್ಷ್ಯ ಅಥವಾ ದಾಖಲೆಗಳ ಮೇಲೆ ತನ್ನ ಸ್ವಂತವಾದ ಸ್ವತಂತ್ರ ತೀರ್ಮಾನಕ್ಕೆ ಬರಬೇಕಾದುದು ಕಾನೂನಿನ ತತ್ವವಾಗಿರುತ್ತದೆ. ಯಾವುದೇ ಇತರೆ ದಾಖಲೆ ಮೇಲಿನ ಸಾಕ್ಷ್ಯ ಅಥವಾ ಕೈಬರಹ ತಜ್ಞರ ವರದಿಯು ಸತ್ಯಕ್ಕೆ ದೂರವಾಗಿದ್ದು, ಒಪ್ಪಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಅಂಥ ವರದಿ ಮತ್ತು ತಜ್ಞರ ಸಾಕ್ಷಿಯನ್ನು ತಿರಸ್ಕರಿಸುವ ಸಂಪೂರ್ಣ ಅಧಿಕಾರ ನ್ಯಾಯಾಲಯಕ್ಕೆ ಇರುತ್ತದೆ. ನ್ಯಾಯಾಲಯವು ಅಂಥ ದಾಖಲೆಗಳನ್ನು ಉದಾಹರಿಸಲಿ ಅಥವಾ ಉದಾಹರಿಸದಿರಲಿ ದಾಖಲೆ ಮೇಲಿನ ವಿಷಯವನ್ನು ವಿಶ್ಲೇಷಿಸುವಾಗ, ನ್ಯಾಯಾಲಯವು, ಈ ದಸ್ತಾವೇಜುಗಳನ್ನು ಪ್ರಾಸಿಕ್ಯೂಷನ್ ಹೇಗೆ ಸಂರಕ್ಷಿಸಿದೆ ಮತ್ತು ನ್ಯಾಯಾಲಯದ ಮುಂದೆ ಹೇಗೆ ಹಾಜರುಪಡಿಸಲಾಗಿದೆ ಎಂಬುದನ್ನು ಪರಿಗಣಿಸಬೇಕಾಗಿರುತ್ತದೆ. ಮುಂದುವರೆದು, ಅದರೊಂದಿಗೆ, ನ್ಯಾಯಾಲಯದ ಮುಂದೆ ದಸ್ತಾವೇಜನ್ನು ಹಾಜರುಪಡಿಸಿದಲ್ಲಿ ಮತ್ತು ನ್ಯಾಯಾಲಯದ ಮುಂದೆ ತಜ್ಞರನ್ನು ತನಿಖೆಗೊಳಪಡಿಸಿದಲ್ಲಿ, ಅಂಥ ಸಾಕ್ಷ್ಯವನ್ನು ಪ್ರಶ್ನಿಸಲು ಆಪಾದಿತರಿಗೆ ಯುಕ್ತವಾದ ಮತ್ತು ವಿಫುಲವಾದ ಅವಕಾಶವಿರುತ್ತದೆ. ಆದ್ದರಿಂದ, ಫಿರ್ಯಾದುದಾರಿಗೆ ಮತ್ತು ಆಪಾದಿತರಿಗೆ ನ್ಯಾಯೋಚಿತವಾದ ಅಧಿವಿಚಾರಣೆ ನಡೆಸಲು ಅವಕಾಶ ಕಲ್ಪಿಸಿಕೊಟ್ಟಾಗ ಅದನ್ನು

ಹೊಡೆಯಲು, ಪ್ರಾಸಿಕ್ಯೂಷನ್‌ನಿಂದ ನ್ಯಾಯಾಲಯದ ಎದುರು ತರುವಾಯ ಘಟನೆಗಳು ನಡೆಯುವುದಿಲ್ಲ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲಾಗುವುದಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ, ಫಿರ್ಯಾದುದಾರ ಮತ್ತು ಆಪಾದಿತರ ಮೌಲ್ಯಯುತ ಹಕ್ಕುಗಳನ್ನು, ಉಭಯ ಪಕ್ಷಕಾರರಿಗೆ ಅವಕಾಶವನ್ನು ಒದಗಿಸುವ ಮೂಲಕ ಅಧಿವಿಚಾರಣಾ ನ್ಯಾಯಾಲಯವು ಸಂರಕ್ಷಿಸುವಾಗ, ಆಪಾದಿತನನ್ನು ಅಂಥ ಸಾಕ್ಷ್ಯಗಳ ಆಧಾರದ ಮೇಲೆ ನಿರ್ದೋಷಿಯೆಂದಾಗಲೀ ಅಥವಾ ದೋಷಿಯೆಂದಾಗಲೀ ರುಜುವಾತುಪಡಿಸಲು ದಸ್ತಾವೇಜುಗಳನ್ನು ಪರಿಗಣಿಸುವುದು ಸಮಯ ಪೂರ್ವ ನಿರ್ಧಾರವಾಗುತ್ತದೆ. ಅದು ಅರ್ಜಿಯನ್ನು ಒಪ್ಪಿಕೊಳ್ಳುವ ಉದ್ದೇಶ ಅಥವಾ ಕಾರಣವಾಗಿರುವುದಿಲ್ಲ. ಆದರೆ, ಉಭಯ ಪಕ್ಷಕಾರರಿಗೆ ಅವಕಾಶವನ್ನು ಒದಗಿಸುವ ವಿಷಯದ ಮತ್ತು ಸ್ವಾಭಾವಿಕ ನ್ಯಾಯದ ತತ್ವವನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಅರ್ಜಿಯನ್ನು ಅಂಗೀಕರಿಸಲು ತಕ್ಕುದಾಗಿರುತ್ತದೆ. ಆದ್ದರಿಂದ ನನಗೆ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಆದೇಶದಲ್ಲಿ ಮಧ್ಯೆ ಪ್ರವೇಶಿಸಲು ಯಾವುದೇ ಬಲವಾದ ಕಾರಣಗಳು ಕಂಡು ಬಂದಿರುವುದಿಲ್ಲ.

25. ಆದ್ದರಿಂದ, ನಾನು ಈ ಮುಂದಿನಂತೆ ಆದೇಶವನ್ನು ಹೊರಡಿಸುತ್ತಿದ್ದೇನೆ.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ವಜಾಗೊಳಿಸುತ್ತಿದ್ದೇನೆ. ಅರ್ಜಿದಾರರ ಪರ ಮಾನ್ಯ ವಕೀಲರು ಈ ನ್ಯಾಯಾಲಯದ ಆದೇಶದ ವಿರುದ್ಧ ಎಸ್‌ಎಲ್‌ಪಿ ಸಲ್ಲಿಸುವ ಅಪೇಕ್ಷೆಯನ್ನು ಹೊಂದಿರುವುದನ್ನು ನಿವೇದಿಸಿಕೊಂಡಿದ್ದು, ಈ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ವಿಸ್ತರಿಸಲು ಕೋರಿರುತ್ತಾರೆ. ಹಾಗಾಗಿ, ಈ ನ್ಯಾಯಾಲಯದ ಮೂಲಕ ನೀಡಿರುವ ತಡೆಯಾಜ್ಞೆಯನ್ನು ಎರಡು ತಿಂಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.